





MAG (2) PRB/CR/36/24-25
T/KN2024/2076

★ E-Bengaluru Beragu ★


# ಈ-ಬೆಂಗಳೂರು ಬೆರಗು


ಸಂಪುಟ: 2 Vol: 2 ಸಂಚಿಕೆ: 10 Issue: 10 ಫೆಬ್ರವರಿ 15 - 28 ಪುಟಗಳು: 12 Pages: 12 ಬೆಲೆ: 15.00 ರೂ.




## ಭಾರತದ ಪ್ರಧಾನಿ ಹೊಸ ಕಚೇರಿಗೆ 'ಸೇವಾ ತೀರ್ಥ' ಎಂಬ ನಾಮಕರಣ



## ದೆಹಲಿ ಮೆಟ್ರೋದಲ್ಲಿ 'ಸರ್ ಎಂ. ವಿಶ್ವೇಶ್ವರಯ್ಯ' ಹೆಸರು: ಮಹಾನ್ ಇಂಜಿನಿಯರ್‌ಗೆ ಗೌರವ








## ಕೇಂದ್ರ ಬಜೆಟ್ 2026–27: ವಿಕಸಿತ ಭಾರತದತ್ತ ಮತ್ತೊಂದು ಹೆಜ್ಜೆ

## ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳು 2025 ಅಂತಿಮ ಅಧಿಸೂಚನೆ ಜಾರಿ



ಈ–ಬೆಂಗಳೂರು ಬೆರಗು
E-Bengaluru Beragu



## ಸಂಪಾದಕರ ಪುಟ



ಬಳ್ಳಾರಿ ನಗರದ ಅಧಿದೇವತೆ ಕನಕದುರ್ಗಮ್ಮ ದೇವಿಯ ಸಿಡಿಬಂಡಿ ರಥೋತ್ಸವ ಇತ್ತೀಚೆಗೆ ಸಾವಿರಾರು ಭಕ್ತರ ಜಯಘೋಷಗಳ ನಡುವೆ ವಿಜೃಂಭಣೆಯಿಂದ ನೆರವೇರಿತು.

(ಚಿತ್ರ: ಮುರಳಿಕಾಂತ ರಾವ್)

# ಈ ರಾಷ್ಟ್ರಗೀತೆಗೂ ಮುನ್ನ ಹಾಡಲು ಆದೇಶ 'ವಂದೇ ಮಾತರಂ'ನ ಎಲ್ಲ 6 ಚರಣ ಹಾಡುವುದು ಕಡ್ಡಾಯ

## ವಂದೇ ಮಾತರಂ

**ವಂದೇ ಮಾತರಂ**
**ವಂದೇಮಾತರಂ**
**ಸುಜಲಾಂ ಸುಫಲಾಂ ಮಲಯಜ ಶೀತಲಾಂ**
**ಸಸ್ಯ ಶ್ಯಾಮಲಾಂ ಮಾತರಂ || ವಂದೇ ||**

**ಶುಭ್ರಜ್ಯೋತ್ಸ್ನಾ ಪುಲಕಿತಯಾಮಿನೀಂ**
**ಪುಲ್ಲಕುಸುಮಿತ ದ್ರುಮದಲ ಶೋಭಿನೀಂ**
**ಸುಹಾಸಿನೀಂ ಸುಮಧುರ ಭಾಷಿಣೀಂ**
**ಸುಖದಾಂ ವರದಾಂ ಮಾತರಂ || ವಂದೇ ||**

**ನ**ವದೆಹಲಿ: ಎಲ್ಲ ಸರ್ಕಾರಿ ಕಾರ್ಯಕ್ರಮಗಳಲ್ಲಿ 'ವಂದೇ ಮಾತರಂ'ನ ಎಲ್ಲ ಆರು ಚರಣಗಳನ್ನು ಹಾಡುವುದು ಕಡ್ಡಾಯ. ರಾಷ್ಟ್ರ ಗೀತೆಯೊಂದಿಗೆ ಹಾಡುವುದಿದ್ದಲ್ಲಿ ಮೊದಲಿಗೆ 'ವಂದೇ ಮಾತರಂ' ಹಾಡಬೇಕು ಎಂದು ಗೃಹ ಸಚಿವಾಲಯ ಸೂಚಿಸಿದೆ. 'ವಂದೇ ಮಾತರಂ' ಹಾಡುವುದಕ್ಕೆ ಮತ್ತು ನುಡಿಸುವುದಕ್ಕೆ ಸಂಬಂಧಿಸಿದಂತೆ ಸಚಿವಾಲಯವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.


ಸಚಿವಾಲಯವು ಜನವರಿ 28ರಂದು ಈ ಸಂಬಂಧ ಆದೇಶ ಹೊರಡಿಸಿದೆ. ಸರ್ಕಾರಿ ಕಾರ್ಯಕ್ರ–ಮಗಳಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ಮತ್ತು ರಾಜ್ಯಪಾಲರು ಆಗಮಿಸುವ ವೇಳೆ ಇಲ್ಲವೇ ಕಾಯಕ್ರಮ ಮುಗಿಸಿ ನಿರ್ಗಮಿಸುವ ವೇಳೆ. ಆಕಾಶವಾಣಿ ಮತ್ತು ಟಿ.ವಿಗಳ ಮೂಲಕ ದೇಶವನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಭಾಷಣ ಮಾಡುವುದಕ್ಕೂ ಮೊದಲು ಹಾಗೂ ನಂತರ, ರಾಷ್ಟ್ರ ಧ್ವಜಾರೋಹಣ ಮಾಡುವ ವೇಳೆ 'ವಂದೇ ಮಾತರಂ'ನ ಎಲ್ಲ ಆರು ಚರಣಗಳನ್ನು ಹಾಡುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಯಾವ ಯಾವ ಸಂದರ್ಭಯಾವ ಸಂದರ್ಭಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಹಾಡಬೇಕು ಅಥವಾ ಇದನ್ನು ಹಾಡಬೇಕಾದ ಕಾರ್ಯಕ್ರಮಗಳ ಪಟ್ಟಿಯನ್ನು ಒದಗಿಸಲು ಸಾಧ್ಯ ಇಲ್ಲ. ರಾಷ್ಟ್ರಗೀತೆಯನ್ನು ಹಾಡುವ ಸಂದರ್ಭಗಳಲ್ಲೆಲ್ಲಾ 'ವಂದೇ ಮಾತರಂ'ನ ಅಧಿಕೃತ ಶೈಲಿಯಲ್ಲಿ ಹಾಡಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಕಾರಣಕ್ಕೆ ಕಳೆದ ವರ್ಷ ಸಂಸತ್ ಚಳಿಗಾಲದ ಅಧಿವೇಶನ–ದಲ್ಲಿ ವ್ಯಾಪಕ ಚರ್ಚೆಗಳು ನಡೆದಿದ್ದವು. ಈಗ, 'ವಂದೇ ಮಾತರಂ' ಗೀತೆಯನ್ನು ಪೂರ್ಣವಾಗಿ ಹಾಡುವುದಕ್ಕೆ ಸಂಬಂಧಿಸಿ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ ಕೈಗೊಂಡಿದ್ದ ನಿರ್ಧಾರದಂತೆ ಪ್ರಸ್ತುತ, 'ವಂದೇ ಮಾತರಂ'ನ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲಾಗುತ್ತಿದೆ. ಈ ಗೀತೆ ಕುರಿತು ಸಂವಿಧಾನ ರಚನಾ ಸಭೆಯಲ್ಲಿಯೂ ಚರ್ಚೆ ನಡೆದಿತ್ತು. ಇದರಲ್ಲಿ 'ಕೋಮುವಾದಿ' ಅಂಶಗಳಿವೆ ಎಂದು ಒಂದು ವರ್ಗದ ಜನರಿಂದ ಆಕ್ಷೇಪ ವ್ಯಕ್ತವಾಗಿತ್ತು. ಹೀಗಾಗಿ, ಈ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡುವ ಕುರಿತು ಸಭೆಯಲ್ಲಿಯೂ ಆಗ ನಿರ್ಣಯ ಕೈಗೊಳ್ಳಲಾಗಿತ್ತು. 'ವಂದೇಮಾತರಂ' ಅನ್ನು ಅಧಿಕೃತ ಶೈಲಿಯಲ್ಲಿ ಹಾಡುವುದಕ್ಕೆ ಅಂದಾಜು 3 ನಿಮಿಷ 10 ಸೆಕೆಂಡುಗಳು ಬೇಕು. ಈ ಗೀತೆಯನ್ನು ಹಾಡುವ/ನುಡಿಸುವ ವೇಳೆ ಸಭಿಕರು/ಪ್ರೇಕ್ಷಕರು ಎದ್ದು ನಿಂತು ಗೌರವ ಸಲ್ಲಿಸಬೇಕು

ಯಾವುದೇ ನ್ಯೂಸ್‌ರೀಲ್ ಅಥವಾ ಸಾಕ್ಷ್ಯಚಿತ್ರ ಇಲ್ಲವೇ ಚಲನಚಿತ್ರದ ಪ್ರದರ್ಶನದ ವೇಳೆ 'ವಂದೇ ಮಾತರಂ' ಗೀತೆಯನ್ನು ಬಿತ್ತರಿಸುತ್ತಿದ್ದರೆ, ಪ್ರೇಕ್ಷಕರು ನಿಲ್ಲುವ ಅಗತ್ಯ ಇಲ್ಲ. ಈ ರೀತಿ ಮಾಡುವುದರಿಂದ ಚಿತ್ರದ ಪ್ರದರ್ಶನಕ್ಕೆ ಅಡ್ಡಿಯನ್ನುಂಟುಮಾಡಿದಂತಾಗಲಿದೆ. ಅಲ್ಲದೇ, ಈ ಗೀತೆಗೆ ಗೌರವ ತರುವುದಕ್ಕಿಂತ ಗೊಂದಲಕ್ಕೆ ಕಾರಣವಾಗುವುದು

ರಾಷ್ಟ್ರಗೀತೆ ಮತ್ತು 'ವಂದೇಮಾತರಂ' ನುಡಿಸುವ/ಹಾಡುವ ವಿಚಾರ ಬಂದಾಗ, ಮೊದಲಿಗೆ 'ವಂದೇಮಾತರಂ' ಹಾಡಬೇಕು ಇಲ್ಲವೇನುಡಿಸಬೇಕು. 'ವಂದೇ ಮಾತರಂ' ಹಾಡುವುದರೊಂದಿಗೆ ಶಾಲಾ ಚಟುವಟಿಕೆಗಳು ಆರಂಭಿಸಬೇಕು. ಶಾಲೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ರಾಷ್ಟ್ರ ಗೀತೆ ಮತ್ತು 'ವಂದೇಮಾತರಂ' ಹಾಡುವುದನ್ನು ಜನಪ್ರಿಯಗೊಳಿಸುವುದಕ್ಕೆ ಶಾಲಾ ಆಡಳಿತಗಳು ಕ್ರಮ ತೆಗೆದುಕೊಳ್ಳಬೇಕು. ಸಚಿವರು ಪಾಲ್ಗೊಳ್ಳುವ ಸಮಾರಂಭಗಳಲ್ಲಿ ಕೂಡ 'ವಂದೇಮಾತರಂ' ಹಾಡುವುದಕ್ಕೆ ಒತ್ತು ನೀಡಬೇಕು. ಇಂತಹ ಕಾರ್ಯಕ್ರಮಗಳಲ್ಲಿ ಸಾಮೂಹಿಕವಾಗಿ ಹಾಡುವುದು ಅಪೇಕ್ಷಣೀಯ. ಸಭಾಂಗಣದಂತಹ ಸ್ಥಳಗಳಲ್ಲಿ ಎಲ್ಲರೂ ಒಟ್ಟಿಗೆ ಹಾಡುವುದಕ್ಕೆ ಅನುಕೂಲವಾಗುವಂತೆ ಧ್ವನಿವರ್ಧಕ ವ್ಯವಸ್ಥೆ ಇರಬೇಕು. ಅಗತ್ಯ ಕಂಡುಬಂದಲ್ಲಿ, 'ವಂದೇ ಮಾತರಂ' ಗೀತೆಯ ಮುದ್ರಿತ ಪ್ರತಿಗಳನ್ನು ಸಭಿಕರಿಗೆ/ಪ್ರೇಕ್ಷಕರಿಗೆ ಹಂಚಬೇಕು. ತಾಯ್ನಾಡಿಗೆ ಗೌರವ ತೋರುವುದಕ್ಕಾಗಿ ಹಾಗೂ ಸಮರ್ಪಕ ಶಿಷ್ಟಾಚಾರ ಪಾಲನೆಯೊಂದಿಗೆ 'ವಂದೇ ಮಾತರಂ' ಅನ್ನು ಸಾಮೂಹಿಕವಾಗಿ ಹಾಡಬಹುದು. ಈ ವೇಳೆ, ಅದರ ಘನತೆಗೆ ಚ್ಯುತಿಯಾಗದಂತೆ ನೋಡಿಕೊಳ್ಳಬೇಕು.



ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

### ಕಥೆ–ಕವನ ಕಳುಹಿಸುವ ಮುನ್ನ

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.

* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.

* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.

* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.

* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.

* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

**ಇ–ಬೆಂಗಳೂರು ಬೆರಗು ವಿಳಾಸ:** ಇ–ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು–560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# ಕೇಂದ್ರ ಬಜೆಟ್ 2026–27: ವಿಕಸಿತ ಭಾರತದತ್ತ ಮತ್ತೊಂದು ಹೆಜ್ಜೆ




**ನ**ವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2026–27ನೇ ಸಾಲಿನ ಕೇಂದ್ರ ಬಜೆಟ್ ಮಂಡಿಸಿದ್ದು, ದೇಶದ ಆರ್ಥಿಕ ಬೆಳವಣಿಗೆ, ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. “ವಿಕಸಿತ ಭಾರತ” ಗುರಿಯೊಂದಿಗೆ ಈ ಬಜೆಟ್ ರೂಪುಗೊಂಡಿದೆ.

ಈ ಬಜೆಟ್‌ನಲ್ಲಿ ಒಟ್ಟು ವೆಚ್ಚವನ್ನು ಸುಮಾರು ?53.4 ಲಕ್ಷ ಕೋಟಿ ಎಂದು ಅಂದಾಜು ನಿರ್ಧರಿಸಲಾಗಿದ್ದು, ಹಣಕಾಸು ಕೊರತೆಯನ್ನು (ಈಚಿಛಿಚಿಟ ಆಜಜಿಛಿಣ) ಉಆಕಯ 4.3% ಮಟ್ಟಕ್ಕೆ ನಿಯಂತ್ರಿಸುವ ಗುರಿ ಹೊಂದಲಾಗಿದೆ. ಆರ್ಥಿಕ ಶಿಸ್ತು ಕಾಪಾಡುವುದರ ಜೊತೆಗೆ ಬೆಳವಣಿಗೆಯೂ ಸಾಧಿಸುವ ಸಮತೋಲನದ ಪ್ರಯತ್ನ ಇದಾಗಿದೆ. ಮೂಲಸೌಕರ್ಯ ಅಭಿವೃದ್ಧಿಗೆ ?12 ಲಕ್ಷ ಕೋಟಿಕ್ಕಿಂತ ಹೆಚ್ಚು ಅನುದಾನ ಮೀಸಲಿರಿಸಲಾಗಿದೆ. ರಸ್ತೆ, ರೈಲು, ಬಂದರು ಮತ್ತು ಲಾಜಿಸ್ಟಿಕ್ಸ್ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ದೇಶದ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡುವ ನಿರೀಕ್ಷೆ ಇದೆ. “ಮೇಕ್ ಇನ್ ಇಂಡಿಯಾ”ಗೆ ಪೂರಕವಾಗಿ ಸೆಮಿಕಂಡಕ್ಟರ್, ಟೆಕ್ಸ್ಟೈಲ್ ಮತ್ತು ಇತರೆ ಕೈಗಾರಿಕಾ ಕ್ಷೇತ್ರಗಳಿಗೆ ಉತ್ತೇಜನ ನೀಡಲಾಗಿದೆ. ದೇಶೀಯ ಉತ್ಪಾದನೆ ಹೆಚ್ಚಿಸುವ ಮೂಲಕ ಆಮದು ಅವಲಂಬನೆ ಕಡಿಮೆ ಮಾಡುವ ಗುರಿ ಹೊಂದಲಾಗಿದೆ. MSME ಮತ್ತು ಸ್ಟಾರ್ಟಪ್‌ಗಳಿಗೆ ಬೆಂಬಲ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ವಿಶೇಷ ನಿಧಿ ಘೋಷಣೆ ಮಾಡಲಾಗಿದೆ. ಸಾಲ ಸೌಲಭ್ಯ ಸುಲಭಗೊಳಿಸಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಕ್ರಮ ಕೈಗೊಳ್ಳಲಾಗಿದೆ. ಇವು ಉದ್ಯೋಗ ಸೃಷ್ಟಿಯಲ್ಲಿ ಪ್ರಮುಖ ಪಾತ್ರವಹಿಸುವ ನಿರೀಕ್ಷೆ ಇದೆ. ತೆರಿಗೆ ವ್ಯವಸ್ಥೆಯಲ್ಲಿ ಸುಧಾರಣೆ. ಹೊಸ ಆದಾಯ ತೆರಿಗೆ ಕಾಯ್ದೆ ಜಾರಿಗೆ ತರಲು ಯೋಜನೆ ರೂಪಿಸಲಾಗಿದೆ.

ಕೃಷಿ ಕ್ಷೇತ್ರಕ್ಕೆ ಪ್ರಾಮುಖ್ಯತೆ. ರೈತರ ಆದಾಯ ಹೆಚ್ಚಿಸಲು ಹಾಗೂ ಉತ್ಪಾದಕತೆ ಸುಧಾರಿಸಲು ಹಲವು ಯೋಜನೆಗಳನ್ನು ಘೋಷಿಸಲಾಗಿದೆ. ರಸಗೊಬ್ಬರ ಸಬ್ಸಿಡಿ ಮತ್ತು ಕೃಷಿ ನವೀನತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಿ ಪಾರದರ್ಶಕತೆ ಹೆಚ್ಚಿಸುವ ಗುರಿ ಹೊಂದಲಾಗಿದೆ.

ರಕ್ಷಣಾ ವೆಚ್ಚ ಹೆಚ್ಚಳ. ದೇಶದ ಭದ್ರತೆಗಾಗಿ ರಕ್ಷಣಾ ವೆಚ್ಚವನ್ನು ಹೆಚ್ಚಿಸಲಾಗಿದ್ದು, ಸ್ವದೇಶೀ ಉತ್ಪಾದನೆಗೆ ಉತ್ತೇಜನ ನೀಡಲಾಗಿದೆ. ಸಾಮಾಜಿಕ ಕ್ಷೇತ್ರಗಳಿಗೆ ಒತ್ತು. ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದೆ.

ಆರ್ಥಿಕ ಬೆಳವಣಿಗೆಗೆ ವೇಗ ನೀಡುವುದು ಉದ್ಯೋಗ ಸೃಷ್ಟಿ ಹೆಚ್ಚಿಸುವುದು. ಸಮಾವೇಶಿತ ಅಭಿವೃದ್ಧಿ ಸಾಧಿಸುವುದು. ಸಂಕ್ಷಿಪ್ತವಾಗಿ 2026 27ರ ಕೇಂದ್ರ ಬಜೆಟ್ ದೀರ್ಘಕಾಲಿಕ ಅಭಿವೃದ್ಧಿಗೆ ಒತ್ತು ನೀಡಿದ ಬಜೆಟ್ ಆಗಿದ್ದು, ತಕ್ಷಣದ ಲಾಭಗಳಿಗಿಂತ ಭವಿಷ್ಯದ ಆರ್ಥಿಕ ಸ್ಥಿರತೆಯ ಮೇಲೆ ಗಮನಹರಿಸುವುದು ಈ ಬಜೆಟ್‌ನ ಪ್ರಮುಖ ಉದ್ದೇಶಗಳು.

2026–27ನೇ ಸಾಲಿನ ವೆಚ್ಚಗಳ ಅಂದಾಜು ಕೇಂದ್ರ ಸರ್ಕಾರದ ತೆರಿಗೆ ವರಮಾನಗಳಿಗಿಂತ ಹೆಚ್ಚು ಎಂದು ನಿರ್ಮಲಾ ಅವರು ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುವ ಸಂದರ್ಭದಲ್ಲಿ ತಿಳಿಸಿದರು. ತೆರಿಗೆ ವರಮಾನದ ಮೂಲಕ ಒಟ್ಟು ರೂ. 44.04 ಲಕ್ಷ ಕೋಟಿ ಸಂಗ್ರಹಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಈ ಬಾರಿ ಬಜೆಟ್‌ನಲ್ಲಿ ಬಂಡವಾಳ ವೆಚ್ಚಗಳಿಗೆ ನಿಗದಿ ಮಾಡಿರುವ ರೂ. 12.2 ಲಕ್ಷ ಕೋಟಿಯು ಈವರೆಗಿನ ಅತಿ ಹೆಚ್ಚಿನ ಮೊತ್ತ ಎಂದರು.

2026–27ನೇ ಸಾಲಿನಲ್ಲಿ ಬಂಡವಾಳ ವೆಚ್ಚವು ರೂ. 16.95 ಲಕ್ಷ ಕೋಟಿ ಆಗಲಿದೆ ಎಂದು ಅಂದಾಜು ಮಾಡಲಾಗಿದೆ. ಮಾರುಕಟ್ಟೆಯಿಂದ ಸಾಲ ಪಡೆಯುವ ಮೂಲಕ ರೂ. 11.7 ಲಕ್ಷ ಕೋಟಿ ಸಂಗ್ರಹಿಸಲಾಗುತ್ತದೆ. ಇನ್ನುಳಿದ ಮೊತ್ತವು ಸಣ್ಣ ಉಳಿತಾಯ ಯೋಜನೆಗಳಿಂದ ಹಾಗೂ ಇತರ ಮೂಲಗಳಿಂದ ಬರಲಿದೆ. ಆಯವ್ಯಯ ಅಂದಾಜುಗಳನ್ನು ಆರ್ಥಿಕ ಮಿತಿಗೊಳಪಟ್ಟು ಕೊರತೆ ಬಜೆಟ್ ಮಂಡಿಸಲು ಅವಕಶವಿದ್ದರೂ ಎಲ್ಲಾ ಸರ್ಕಾರಗಳಿಗೆ ಭಾರತದ ಸಾಮಾಜಿಕ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ವೆಚ್ಚಗಳಿಗೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಮಿಗತೆ ಬಜೆಟ್ ಮಂಡಿಸಲು ಸಾಧ್ಯವಾಗುತ್ತಿಲ್ಲ. ಒಟ್ಟಾರೆ ಭಾರತ ಸರ್ಕಾರದ 2026–27 ಸಾಲಿನ ಅಧಿಕೃತ ಆಯವ್ಯಯ ಅಂದಾಜು ಪ್ರಸ್ತಾವನೆಗಳ ಜನಸಾಮಾನ್ಯರಿಗೆ ಹೆಚ್ಚಿನ ತೆರಿಗೆ ಹೊರೆಯಾಗದಂತೆ ತೃಪ್ತಿ ನೀಡಿದಂತಾಗಿದೆ.

# ಭಾರತದ ಪ್ರಧಾನಿ ಹೊಸ ಕಚೇರಿಗೆ ‘ಸೇವಾ ತೀರ್ಥ’ ಎಂಬ ನಾಮಕರಣ



**ಪ್ರ**ಧಾನಮಂತ್ರಿ ಕಚೇರಿಯನ್ನು(ಪಿಎಂಒ) ನೂತನ ಕಟ್ಟಡ ‘ಸೇವಾ ತೀರ್ಥ’ಕ್ಕೆ ಶುಕ್ರವಾರ ಸ್ಥಳಾಂತರಗೊಳಿಸಲಾಯಿತು. ಇನ್ನು ಮುಂದೆ ‘ಪ್ರಧಾನ ಮಂತ್ರಿ ಕಚೇರಿ’ಯನ್ನು ‘ಸೇವಾ ತೀರ್ಥ ಎಂದೇ ಕರೆಯಲಾಗುತ್ತದೆ. ಈ ಮೊದಲು ರಾಷ್ಟ್ರಪತಿ ಭವನ ಬಳಿಯ ಸೌತ್ ಬ್ಲಾಕ್‌ನಲ್ಲಿ ಈ ಕಚೇರಿ ಇತ್ತು 95 ವರ್ಷಗಳ ನಂತರ ಪಿಎಂಒ ಸ್ಥಳಾಂತರಗೊಳಿಸಿದಂತಾಗಿದೆ. ಕೇಂದ್ರೀಯ ಸಚಿವಾಲಯ ಎರಡು ಕಟ್ಟಡ ಹೊಂದಿದ್ದು, ಇವನ್ನು ‘ಕರ್ತವ್ಯ ಭವನ 1’ ಹಾಗೂ ‘ಕರ್ತವ್ಯ ಭವನ 2’ ಎಂಬುದಾಗಿ ಕರೆಯಲಾಗುತ್ತದೆ.

1931ರ ಫೆಬ್ರವರಿ 13ರಂದು ನವದೆಹಲಿಯನ್ನು ಭಾರತದ ರಾಜಧಾನಿಯಾಗಿ ಘೋಷಿಸಲಾಗಿ, 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ವಸಾಹತುಶಾಹಿ ಕಾಲದ ಪ್ರತೀಕಗಳನ್ನು ಬದಲಾಯಿಸಿ, ದೇಸಿತನಕ್ಕೆ ಒತ್ತು ನೀಡುತ್ತಿರುವ ಭಾಗವಾಗಿ ಹಲವಾರು ಕಛೇರಿಗಳನ್ನು ಕಲ್ಕತ್ತಾದಿಂದ ದೆಹಲಿಗೆ ಮತ್ತು ಹೊಸದಾಗಿ ನಿರ್ಮಿಸಲಾಗುತ್ತಿರುವ ಹೊಸನಗರ ಹೊಸದೆಹಲಿ ಕಟ್ಟಡಗಳ ನಿರ್ಮಾಣದೊಂದಿಗೆ ಲ್ಯೂಟನ್ ಇಂಜಿನಿಯರ್‌ರವರ ಸಾರಥ್ಯದಲ್ಲಿ ನಿರ್ಮಾಣಗಳು ಪ್ರಾರಂಭವಾಯಿತು. ಬ್ರಿಟೀಷರ ಆಳ್ವಿಕೆಯ ಹಲವಾರು ಹಳೆಯ ಮತ್ತು 95 ವರ್ಷಗಳ ಕಟ್ಟಡಗಳನ್ನು ನವೀಕರಿಸುವ ಬದಲು ಹೊಸ ಕಟ್ಟಡಗಳನ್ನು ಕಟ್ಟಲು 2014 ರಲ್ಲಿ ನಿರ್ಧರಿಸಲಾಯಿತು. ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಮನೋಹರ ಲಾಲ್ ಖಟ್ಟರ್, ಜಿತೇಂದ್ರ ಸಿಂಗ್ ಹಾಗೂ ಪಿಎಂಒದ ಉನ್ನತ ಅಧಿಕಾರಿಗಳಿದ್ದ ವಾಹನಗಳು ಸೌತ್ ಬ್ಲಾಕ್‌ನಿಂದ ಹೊರಟು ‘ಸೇವಾ ತೀರ್ಥ’ ತಲುಪಿದವು. ನೂತನ ಕಛೇರಿಯಲ್ಲಿ ಪಿಎಂಒ, ರಾಷ್ಟ್ರೀಯ ಭದ್ರತಾ ಪರಿಷತ್ತಿನ ಸಚಿವಾಲಯ ಹಾಗೂ ಸಂಪುಟ ಉದ್ಘಾಟಿಸಿದರು.

ನೂತನ ಕಚೇರಿಗೆ ಪ್ರವೇಶಿಸಿದ ಬಳಿಕ ಅಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಮೋದಿ ಪೂಜೆ ಸಲ್ಲಿಸಿದರು. ‘ಸೇವಾ ತೀರ್ಥ’ ಎಂದು ದೇವನಾಗರಿ ಲಿಪಿಯಲ್ಲಿ ಬರೆದಿರುವ ಫಲಕವನ್ನು ಇದೇ ವೇಳೆ ಅವರು ಅನಾವರಣಗೊಳಿಸಿದರು. ;ನಾಗರಿಕ ದೇವೋ ಭವ’ ಎಂಬ ಅಡಿಬರಹವೂ ಇದೇ ಫಲಕದಲ್ಲಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಪ್ರಧಾನ ಕಾರ್ಯದರ್ಶಿಗಳಾದ ಪಿ.ಕೆ.ಮಿಶ್ರಾ, ಶಕ್ತಿಕಾಂತ ದಾಸ್ ಇದ್ದರು. ಹಲವು ದಶಕಗಳಿಂದ ಕೇಂದ್ರ ಸರ್ಕಾರದ ಪ್ರಮುಖ ಕಚೇರಿಗಳು ಹಾಗೂ ಸಚಿವಾಲಯಗಳು ಸೆಂಟ್ರಲ್ ವಿಸ್ಟಾ ಪ್ರದೇಶದಲ್ಲಿನ ವಿವಿಧ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅನೇಕ ಕಟ್ಟಡಗಳು ಶಿಥಿಲವಾಗಿದ್ದವು. ಹೊಸ ಕಟ್ಟಡಗಳಿಗೆ ಕಚೇರಿಗಳನ್ನು/ಸಚಿವಾಲಯಗಳನ್ನು ಸ್ಥಳಾಂತರಗೊಳಿಸುವ ಜೊತೆಗೆ, ಅವುಗಳ ಹೆಸರುಗಳನ್ನು ಕೂಡ ಬದಲಾಯಿಸುವುದಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಇದರ ಭಾಗವಾಗಿ, ಪ್ರಧಾನಿಯ ಗೃಹ ಕಚೇರಿ ಇರುವ ‘ರೇಸ್ ಕೋರ್ಸ್ ರಸ್ತೆ’ಯನ್ನು ‘ಲೋಕ ಕಲ್ಯಾಣ ಮಾರ್ಗ’ ಎಂದು ಬದಲಾಯಿಸಲಾಗಿದೆ. ಕೇಂದ್ರ ಸಚಿವಾಲಯದ ಕಚೇರಿಗಳಿರುವ ಕಟ್ಟಡವನ್ನು ‘ಕರ್ತವ್ಯ ಭವನ’ ಹಾಗೂ ರಾಜಪಥವನ್ನು ‘ಕರ್ತವ್ಯ ಪಥ’ ಎಂಬುದಾಗಿ ಬದಲಾಯಿಸಲಾಗಿದೆ.

‘ಪ್ರಧಾನಮಂತ್ರಿ ಕಚೇರಿ (ಸೇವಾ ತೀರ್ಥ) ಹಾಗೂ ಕೇಂದ್ರೀಯ ಸಚಿವಾಲಯ (ಕರ್ತವ್ಯ ಭವನ) ಒಳಗೊಂಡಿರುವ ಹೊಸ ಕಟ್ಟಡಗಳು ವಿಕಸಿತ ಭಾರತದತ್ತ ದೇಶ ಕೈಗೊಂಡಿರುವ ಪಯಣದಲ್ಲಿ ಮಹತ್ವದ ಮೈಲುಗಲ್ಲುಗಳಾಗಿವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ‘ಸೇವಾ ತೀರ್ಥ’ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು,’ ‘ಈ ಕಟ್ಟಡಗಳು ನಾಗರಿಕ ಕೇಂದ್ರಿತ ಆಡಳಿತ ಮತ್ತು ದೇಶದ ಅಭಿವೃದ್ಧಿ ಕುರಿತು ನಮ್ಮ ಸರ್ಕಾರ ಹೊಂದಿರುವ ಬದ್ಧತೆಯನ್ನು ಪ್ರತಿಫಲಿಸುತ್ತವೆ’ ಎಂದರು. ‘ರಕ್ಷಣಾ, ಗೃಹ ಹಾಗೂ ಹಣಕಾಸು ಸಚಿವಾಲಯಗಳಿರುವ ಐತಿಹಾಸಿಕ ಕಟ್ಟಡಗಳಾದ ಸೌತ್ ಬ್ಲಾಕ್ ಹಾಗೂ ನಾರ್ತ್ ಬ್ಲಾಕ್ ಬ್ರಿಟಿಷ್ ಸಾಮ್ರಾಜ್ಯದ ಆದರ್ಶಗಳ ಅಭಿವ್ಯಕ್ತಿಯಂತಿದ್ದವು. ಸೇವಾ ತೀರ್ಥ ಹಾಗೂ ಕರ್ತವ್ಯ ಭವನಗಳನ್ನು ದೇಶದ ಪ್ರಜೆಗಳ ಆಶೋತ್ತರಗಳನ್ನು ಸಾಕಾರಗೊಳಿಸುವುದಕ್ಕಾಗಿ ನಿರ್ಮಿಸಲಾಗಿದೆ’ ಎಂದು ಹೇಳಿದರು. ಸೇವಾ ತೀರ್ಥದ ಉದ್ಘಾಟನೆ ಸ್ಮರಣಾರ್ಥ ಅದರ ಚಿತ್ರವಿರುವ ಅಂಚೆ ಚೀಟಿ ಹಾಗೂ ನಾಣ್ಯವನ್ನು ಇದೇ ವೇಳೆ ಮೋದಿ ಬಿಡುಗಡೆ ಮಾಡಿದರು.

# ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳು 2025 ಅಂತಿಮ ಅಧಿಸೂಚನೆ ಜಾರಿ




**ಬೆಂ**ಗಳೂರು ರಸ್ತೆಗಳಲ್ಲಿ ಪ್ರತಿ 200 ಅಡಿಗೆ ಎರಡು ಜಾಹೀರಾತು ಪ್ರದರ್ಶಿಸಲು ಅವಕಾಶ ಮಾಡಿಕೊಡುವ ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳು-2025 ಅನ್ನು ಅಂತಿಮಗೊಳಿಸಿ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದ 2025ರ ನವೆಂಬರ್ 13ರಂದು ಕರಡು ಅಧಿಸೂಚನೆ ಹೊರಡಿಸ ಲಾಗಿತ್ತು. 30 ದಿನದಲ್ಲಿ ಬಂದ ಸಾರ್ವಜನಿಕ ಸಲಹೆ, ಆಕ್ಷೇಪಗಳನ್ನು ಪರಿಗಣಿಸಿ, ಜ.13ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಲಾಗಿದೆ.

ಆಯಾ ಪ್ರದೇಶದ ಸ್ಥಿರಾಸ್ತಿ ಮಾರ್ಗಸೂಚಿ ದರದ ಆಧಾರದಲ್ಲಿ ಜಾಹೀರಾತು ಶುಲ್ಕವನ್ನು ನಿಗದಿಪಡಿಸಿ, ರಸ್ತೆಯ ಅಗಲಕ್ಕೆ ಅನುಗುಣವಾಗಿ ಪ್ರತಿ 100 ಮೀಟರ್‌ಗೆ ಜಾಹೀರಾತು ಪ್ರದರ್ಶಿಸಬಹುದು ಎಂದು 2025ರ ಜುಲೈ 15ರಂದು 'ಬಿಬಿಎಂಪಿ (ಜಾಹೀರಾತು) ಬೈಲಾ 2024' ಅನ್ನು ಅಧಿಸೂಚಿಸಲಾಗಿತ್ತು, ಜಿಬಿಎ, ಐದು ನಗರ ಪಾಲಿಕೆಗಳು ರಚನೆಯಾದ ಮೇಲೆ, ಬಹುತೇಕ ಅದೇ ನಿಯಮಗಳು ನಗರ ಪಾಲಿಕೆಗಳಿಗೆ ಅನ್ವಯವಾಗುವಂತೆ ಬದಲಾವಣೆ ಮಾಡಿ ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳನ್ನು ಜಾರಿ ಮಾಡಲಾಗಿದೆ. ಕಳೆದ ಬಾರಿಗಿಂತ ಜಾಹೀರಾತು ಶುಲ್ಕ ಕಡಿಮೆ ಮಾಡುವ ಜೊತೆಗೆ, ರಸ್ತೆಯ ಅಕ್ಕಪಕ್ಕ 100 ಅಡಿಗೆ ಎರಡು ಜಾಹೀರಾತು ಪ್ರದರ್ಶಿಸಲು ನೀಡಲಾಗಿದ್ದ ಅವಕಾಶವನ್ನು 200 ಅಡಿಗೆ ಹೆಚ್ಚಿಸಲಾಗಿದೆ.

ಜಾಹೀರಾತು ನಿಯಂತ್ರಣ ಸಮಿತಿ ಸದಸ್ಯರಾಗಿ ಜಿಬಿಎ ಬೆಂಗಳೂರು ನಗರ ಪೊಲೀಸ್ ಕಮಿಷನರ್, ಮುಖ್ಯ ಆಯುಕ್ತ-ಅಧ್ಯಕ್ಷ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ-ಸದಸ್ಯರು; ಜಿಬಿಎ ಮುಖ್ಯ ಆಯುಕ್ತರು ಸೂಚಿಸುವ ವಿಶೇಷ ಆಯುಕ್ತ-ಸದಸ್ಯ ಕಾರ್ಯದರ್ಶಿ.

ಜಾಹೀರಾತು ಸಲಹಾ ಸಮಿತಿ ಸದಸ್ಯರಾಗಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ-ಅಧ್ಯಕ್ಷ ಜಿಬಿಎ ಮುಖ್ಯ ಆಯುಕ್ತ, ಜಾಹೀರಾತು ಉದ್ಯಮದ ಸಂಘಟನೆಯ ಪ್ರತಿನಿಧಿ, ಯಾವುದಾದರೂ ಎರಡು ನಗರ ಪಾಲಿಕೆ ಆಯುಕ್ತರು (ಪ್ರತಿ ವರ್ಷ ಬದಲು)-ಸದಸ್ಯರು; ಜಿಬಿಎ ಮುಖ್ಯ ಆಯುಕ್ತರು ಸೂಚಿಸಿದ ವಿಶೇಷ ಆಯುಕ್ತ-ಸದಸ್ಯ ಕಾರ್ಯದರ್ಶಿ

ರಸ್ತೆಗಳು ಮತ್ತೆಗಳು ಹಾಗೂ ಪ್ರದೇಶಗಳ ಮುಕ್ತ ಹರಾಜು ಅಥವಾ ಟೆಂಡರ್ ಅನ್ನು ಪ್ರತ್ಯೇಕ ಅಥವಾ ಲಾಟ್‌ಗಳಲ್ಲಿ ಒಟ್ಟುಗೂಡಿಸಿ ಏಜೆನ್ಸಿಗಳಿಗೆ ಪರವಾನಗಿ ನೀಡುವ ನಿರ್ಧಾರವನ್ನು ಜಿಬಿಎ ಮುಖ್ಯ ಆಯುಕ್ತರ ನೇತೃತ್ವದ ಜಾಹೀರಾತು ನಿಯಂತ್ರಣ ಸಮಿತಿಗೆ ನೀಡಲಾಗಿದೆ. ಅಲ್ಲದೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಜಾಹೀರಾತು ಸಲಹಾ ಸಮಿತಿ ರಚಿಸಲಾಗಿದೆ. ಹೊಸ ಜಾಹೀರಾತು ನೀತಿಯಿಂದ ಒಟ್ಟಾರೆ ವಾರ್ಷಿಕ 6800 ಕೋಟಿ ಸಂಗ್ರಹಿಸುವ ನಿರೀಕ್ಷೆ ಇದೆ.

ಬಿಎಂಆರ್‌ಸಿಎಲ್, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳು, ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯದ ಕಟ್ಟಡ, ಆವರಣದಲ್ಲಿ ಪ್ರದರ್ಶಿಸುವ ಜಾಹೀರಾತುಗಳಿಗೆ ಆಯಾ ಸಂಸ್ಥೆಗಳು ಅವರ ನಿಯಮಗಳಂತೆ ಕ್ರಮ ಕೈಗೊಳ್ಳಬಹುದು. ಆದರೆ, ಸಾರ್ವಜನಿಕ ಸ್ಥಳ, ರಸ್ತೆಯಲ್ಲಿ ಜಾಹೀರಾತು ಪ್ರದರ್ಶಿಸಿದರೆ ಅದರ ಸಂಪೂರ್ಣ ಶುಲ್ಕವನ್ನು ನಗರ ಪಾಲಿಕೆಗೆ ಪಾವತಿಸಬೇಕು. ಇನ್ನು, ನಮ್ಮಮೆಟ್ರೊ, ಪಿಲ್ಲರ್, ನಿಲ್ದಾಣ, ಮೂಲಸೌಕರ್ಯಗಳಲ್ಲಿ ಬಿಎಂಆರ್ ಸಿಎಲ್, 'ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮ-2025'ರಂತೆಯೇ ಟೆಂಡರ್ ಕರೆದು ಅವಕಾಶ ನೀಡಬಹುದು. ಮೆಟ್ರೊ ಪಿಲ್ಲರ್‌ಗಳ ಜಾಹೀರಾತಿನಿಂದ ಬರುವ ಶುಲ್ಕ, ಬಿಎಂಆರ್‌ಸಿಎಲ್ ಹಾಗೂ ಆಯಾ ನಗರ ಪಾಲಿಕೆಗಳ ಜಂಟಿ ಖಾತೆಯಲ್ಲಿ ಜಮೆಯಾಗ ಬೇಕು. ಇದನ್ನು ಎರಡೂ ಸಂಸ್ಥೆಗಳು ಸಮನಾಗಿ ಉಪಯೋಗಿಸಿಕೊಳ್ಳಬೇಕು.

ಸಂಚಾರಿ ಜಾಹೀರಾತುಗಳನ್ನು ಪ್ರದರ್ಶಿಸಲು ಆಯಾ ನಗರ ಪಾಲಿಕೆಗಳಿಂದ ಆನ್‌ಲೈನ್‌ನಲ್ಲಿ ಪೂರ್ವಾನುಮತಿ ಪಡೆದು ಕೊಳ್ಳಬೇಕು. ಪ್ರದರ್ಶನದ ಅವಧಿ, ಉದ್ದೇಶ, ವಾಹನ ಸಂಖ್ಯೆ ವಾಹನಗಳ ಪಟ್ಟಿಯನ್ನು ನೀಡಿ, ಜಾಹೀರಾತು ಪುದರ್ಶನಕ, ನಗರ ಪಾಲಿಕೆಯಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಳ್ಳಬೇಕು, ಬಿಎಂಟಿಸಿ ಸೇರಿದಂತೆ ಎಲ್ಲ ವಾಹನಗಳಲ್ಲಿ ಪ್ರದರ್ಶಿಸುವ ವಾಹನಗಳಿಗೆ ಅನುಗುಣವಾದ ಶುಲ್ಕ, ಪಾವತಿಸಬೇಕು. ಮನೆಗಳಲ್ಲಿ ಮಿನುಗುವ ಫಲಕ ಅಳವಡಿಕೆ ನಿರ್ಬಂಧ. ವಸತಿ ಪ್ರದೇಶಗಳಲ್ಲಿ ರಾತ್ರಿ 11ರ ನಂತರ ಪ್ರಕಾಶಮಾನ ಜಾಹೀರಾತು ಪ್ರದರ್ಶನ ಇಲ್ಲ.

'ಬಿ' ಖಾತಾ ಆಸ್ತಿಯಲ್ಲಿ ಅವಕಾಶ ಇಲ್ಲ. ಐದೂ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಸತಿ ಪ್ರದೇಶ ಅಥವಾ ವಾಣಿಜ್ಯ ಪ್ರದೇಶದಲ್ಲಿರುವ ನಿವೇಶನಗಳು 'ಬಿ' ಖಾತಾ ಹೊಂದಿದ್ದರೆ ಅಥವಾ ಯಾವುದೇ ರೀತಿಯ ಖಾತಾ ಹೊಂದಿರದಿದ್ದರೆ ಜಾಹೀರಾತು ಪ್ರದರ್ಶನ ವನ್ನು ನಿರ್ಬಂಧಿಸಲಾಗಿದೆ. ಖಾತಾ ಇಲ್ಲದ ಹಾಗೂ ತೆರಿಗೆ ಪಾವತಿಸದ ಆಸ್ತಿಯಲ್ಲಿರುವ ಜಾಹೀರಾತನ್ನು ನಗರ ಪಾಲಿಕೆ ತೆರವು ಗೊಳಿಸುತ್ತದೆ. ಅಲ್ಲದೆ, ಜಾಹೀರಾತು ಪ್ರದರ್ಶಿಸಿದ ಅವಧಿಗೆ ನಿಯಮದಲ್ಲಿ ತಿಳಿಸಲಾಗಿರುವ ಶುಲ್ಕದ ದುಪ್ಪಟ್ಟು ದಂಡವನ್ನೂ ವಿಧಿಸಲಾಗುತ್ತದೆ.

ಜಾಹೀರಾತು ಎಲ್ಲೆಲ್ಲಿ ನಿಷೇಧ? ದೇವಾಲಯ, ಮಸೀದಿ, ಗುರುದ್ವಾರ, ಚರ್ಚ್ ಮತ್ತು ಇತರ ಧಾರ್ಮಿಕ ಸ್ಥಳಗಳಿಂದ ನೂರು ಮೀಟರ್ ಒಳಗೆ, ಮೇಲೇತುವೆ, ಎಲಿವೇಟೆಡ್ ಕಾರಿಡಾರ್. ಸಂವಹನ ಗೋಪುರ, ವಿಶ್ವ ಪಾರಂಪರಿಕ ತಾಣ, ರಾಷ್ಟ್ರೀಯ ಉದ್ಯಾನ ಗಳು, ಅರಣ್ಯ, ಜಲಮೂಲ, ಜಲಮಂಡಳಿಯ ನೀರು ಸಂಗ್ರಹಾಗಾರ, ಸ್ಮಾರಕಗಳಿರುವ 50 ಮೀಟರ್ ಒಳಗೆ ಜಾಹೀರಾತು ಪ್ರದರ್ಶನ ವನ್ನು ನಿಷೇಧಿಸಲಾಗಿದೆ. (ವಾಹನ ಚಾಲಕರ ಏಕಾಗ್ರತೆಗೆ ಭಂಗವನ್ನು ಉಂಟು ಮಾಡುವ ಜಾಹೀರಾತು, ಸಂಚಾರ. ಸಿಗ್ನಲ್ ದೀಪಗಳ ಬಣ್ಣ, ನಗರದ ವಿರೂಪಕ್ಕೆ ಕಾರಣವಾಗಬಹು ದಾದ ಭಿತ್ತಿಪತ್ರ, ಗೀಚುಬರಹ, ಮರದ ಮೇಲೆ ಅಂಟಿಸಲಾದ, ಮೊಳೆ ಹೊಡೆದ, ಕಟ್ಟಿದ ಲಗತ್ತಿಸಿದ. ಜೋಡಿಸಿದ ಜಾಹೀರಾತನ್ನು ನಿಷೇಧಿಸ ಲಾಗಿದೆ. ಹೈಮಾಸ್ಟ್, ಬೀದಿ ದೀಪ, ವಿದ್ಯುತ್ ಕಂಬಗಳ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಇಲ್ಲ.



# ಸಿದ್ಧರಾಮಯ್ಯ ಸರ್ಕಾರ-ಸಾವಿರ ದಿನಗಳ ಸಾಧನೆ

**ಕ**ರ್ನಾಟಕದ ರಾಜಕೀಯ ಇತಿಹಾಸದಲ್ಲಿ ಸಿದ್ದರಾಮಯ್ಯ ಎಂಬ ಹೆಸರು ಕೇವಲ ಒಬ್ಬ ವ್ಯಕ್ತಿಯದ್ದಲ್ಲ, ಅದೊಂದು ಶಕ್ತಿ. 1983ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದಾಗಿನಿಂದ ಇಂದಿನವರೆಗೆ ಸತತ ಒಂಬತ್ತು ಬಾರಿ ಜನಪ್ರತಿನಿಧಿಯಾಗಿ, ರಾಜ್ಯದ ಇತಿಹಾಸದಲ್ಲಿ ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಎರಡನೇ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಸಿದ್ದರಾಮಯ್ಯನವರು, ಇದೇ ಫೆಬ್ರವರಿ 14ಕ್ಕೆ ತಮ್ಮ ಎರಡನೇ ಅವಧಿಯ 1000 ದಿನಗಳನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

ಬಡ ರೈತ ಕುಟುಂಬದಲ್ಲಿ ಹುಟ್ಟಿ ಹಸಿವಿನ ನೋವನ್ನುಂಡ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ 24 ಗಂಟೆಗಳಲ್ಲಿ ಜಾರಿಗೆ ತಂದ 'ಅನ್ನಭಾಗ್ಯ' ಯೋಜನೆ ಇಂದು ದೇಶಕ್ಕೇ ಮಾದರಿ. ಇಂದು ರಾಜ್ಯದ 4.4 ಕೋಟಿ ಫಲಾನುಭವಿಗಳು ಈ ಯೋಜನೆಯಡಿ ಹಸಿವು ಮುಕ್ತ ಜೀವನ ನಡೆಸುತ್ತಿದ್ದಾರೆ. ನಂತರ ಕೆಲವು ತಿಂಗಳ ಬಳಿಕ ಅಕ್ಕಿಯ ಜೊತೆಗೆ ಬೇಳೆ, ಸಕ್ಕರೆ, ಉಪ್ಪು ಮತ್ತು ಎಣ್ಣೆಯನ್ನೊಳಗೊಂಡ ಪೌಷ್ಟಿಕ ಕಿಟ್ ನೀಡುವ ನಿರ್ಧಾರ ಅವರ ಜನಪರ ಕಾಳಜಿಗೆ ಸಾಕ್ಷಿ.

ಕೇವಲ ಭರವಸೆಗಳನ್ನು ನೀಡದೆ, ನುಡಿದಂತೆ ನಡೆದ ಸರ್ಕಾರವಿದು. ಪಂಚ ಗ್ಯಾರಂಟಿಗಳ ಮೂಲಕ ರಾಜ್ಯದ ಪ್ರತಿ ಮನೆಯ ಆರ್ಥಿಕ ಶಕ್ತಿಯನ್ನು ಹೆಚ್ಚಿಸಲಾಗಿದೆ:

ಗೃಹಲಕ್ಷ್ಮಿ: 1.25 ಕೋಟಿ ಮಹಿಳೆಯರ ಖಾತೆಗೆ ಪ್ರತಿ ತಿಂಗಳು ರೂ. 2,000 ತಲುಪುತ್ತಿದೆ. ಇದುವರೆಗೆ ಬರೋಬ್ಬರಿ ರೂ. 47,773 ಕೋಟಿ ವೆಚ್ಚ ಮಾಡುವ ಮೂಲಕ ಮಹಿಳಾ ಸಬಲೀಕರಣಕ್ಕೆ ಹೊಸ ಭಾಷ್ಯ ಬರೆಯಲಾಗಿದೆ. ಹಾವೇರಿ ಜಿಲ್ಲೆಯೊಂದರಲ್ಲೇ 3,85,631 ಫಲಾನುಭವಿಗಳಿಗೆ ರೂ. 1,864.47 ಕೋಟಿ ತಲುಪಿದೆ.

ಗೃಹಜ್ಯೋತಿ: 1.68 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದ್ದು, ರೂ. 18,900 ಕೋಟಿ ವೆಚ್ಚ ಮಾಡಲಾಗಿದೆ. ಹಾವೇರಿಯಲ್ಲಿ 3,94,550 ಜನ ಇದರ ಲಾಭ ಪಡೆಯುತ್ತಿದ್ದಾರೆ.

ಶಕ್ತಿ ಯೋಜನೆ: ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಈ ಯೋಜನೆ 'ಗಿನ್ನಿಸ್ ವರ್ಲ್ಡ್ ರೆಕಾರ್ಡ್' ಸೇರಿದೆ. 680 ಕೋಟಿಗೂ ಹೆಚ್ಚು ಬಾರಿ ಮಹಿಳೆಯರು ಪ್ರಯಾಣಿಸಿದ್ದು ರೂ. 8,815 ಕೋಟಿ ವೆಚ್ಚ ಭರಿಸಲಾಗಿದೆ.

ಯುವನಿಧಿ: ನಿರುದ್ಯೋಗಿ ಪದವೀಧರರಿಗೆ ಆಸರೆಯಾಗಿರುವ ಈ ಯೋಜನೆಯಡಿ 3.7 ಲಕ್ಷ ಯುವಕರಿಗೆ ರೂ. 4,375 ಕೋಟಿ ನೆರವು ನೀಡಲಾಗಿದೆ.

ಅನ್ನಭಾಗ್ಯ: ಆಹಾರ ಭದ್ರತೆಗಾಗಿ ಹಾವೇರಿಯಲ್ಲಿ 2.29 ಕೋಟಿ ಫಲಾನುಭವಿಗಳಿಗೆ ಹಾಗೂ ರಾಜ್ಯಾದ್ಯಂತ ಒಟ್ಟು ರೂ. 17,495.72 ಕೋಟಿ (ನಗದು ಮತ್ತು ಧಾನ್ಯ ಸೇರಿ) ವ್ಯಯಿಸಲಾಗಿದೆ.

'ಭೂ ಗ್ಯಾರಂಟಿ': ಅಸ್ತಿತ್ವದ ರಕ್ಷಣೆ: ದಾಖಲೆಗಳಿಗಾಗಿ ಕಚೇರಿ ಅಲೆಯುತ್ತಿದ್ದ ಕಾಲಕ್ಕೆ ವಿದಾಯ ಹಾಡಿರುವ ಸರ್ಕಾರ, 67 ಕೋಟಿ ಪುಟಗಳ ಭೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿದೆ. 'ಲ್ಯಾಂಡ್ ಬೀಟ್' ತಂತ್ರಜ್ಞಾನದ ಮೂಲಕ 13.5 ಲಕ್ಷ ಎಕರೆ ಸರ್ಕಾರಿ ಜಮೀನು ರಕ್ಷಿಸಲಾಗಿದೆ. ಲಂಬಾಣಿ ತಾಂಡಾ, ಹಟ್ಟಿಗಳ ನಿವಾಸಿಗಳಿಗೆ 3 ಲಕ್ಷಕ್ಕೂ ಅಧಿಕ ಹಕ್ಕುಪತ್ರ ನೀಡಿರುವುದು ಸಾಮಾಜಿಕ ನ್ಯಾಯದ ದೊಡ್ಡ ಗೆಲುವು.

16 ಬಜೆಟ್ ಮಂಡಿಸಿ ದಾಖಲೆ ಬರೆದಿರುವ ಸಿದ್ದರಾಮಯ್ಯನವರು, ರಾಜ್ಯದ ತಲಾ ಆದಾಯವನ್ನು ರೂ. 2,04,605 ಕ್ಕೆ ಏರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೇಂದ್ರ ಸರ್ಕಾರದ ಅಸಹಕಾರ ಮತ್ತು ಅನುದಾನದ ಕೊರತೆಯ ನಡುವೆಯೂ, ಭದ್ರಾ ಮೇಲ್ದಂಡೆ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಗಳಿಗೆ ಐತಿಹಾಸಿಕ ಮೊತ್ತದ ಪರಿಹಾರ ಘೋಷಿಸಿದ್ದಾರೆ. ಕೆಎಂಎಫ್ ಉತ್ತೇಜನಕ್ಕೆ ಹಾಲಿನ ಪ್ರೋತ್ಸಾಹಧನ ಹೆಚ್ಚಿಸಿರುವುದು ರೈತರಿಗೆ ವರದಾನವಾಗಿದೆ. ಬಸವ ತತ್ವ, ಅಂಬೇಡ್ಕರ್ ಆಶಯ ಮತ್ತು ಪಂಚ ಗ್ಯಾರಂಟಿಗಳ ಮೂಲಕ ಹಸಿವು ಮುಕ್ತ ಆರ್ಥಿಕ ಸಬಲತೆಯತ್ತ ರಾಜ್ಯದ ದಾಪುಗಾಲು; ಇತಿಹಾಸ ಸೃಷ್ಟಿಸಿದ ಜನನಾಯಕನ ಆಡಳಿತ ವೈಖರಿ.

# ಭಾರತದ ವಾಯುಸೇನೆಗೆ 114 ರಫೇಲ್ ವಿಮಾನ ಖರೀದಿ



ದೇಶದ ಗಗನರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸುವ ಮಹತ್ವದ ಹೆಜ್ಜೆಯಾಗಿ ಭಾರತವು ಫ್ರಾನ್ಸ್‌ನ Dassault Aviation ಕಂಪನಿಯಿಂದ 36 ರಫೇಲ್ ಯುದ್ಧವಿಮಾನಗಳನ್ನು ಖರೀದಿಸಿರುವುದು ಈಗಾಗಲೇ ಕಾರ್ಯ ರೂಪಕ್ಕೆ ಬಂದಿದೆ. ಈ ಯುದ್ಧವಿಮಾನಗಳು Indian Air Forceಗೆ ಸೇರಿದ್ದು, ದೇಶದ ಭದ್ರತಾ ವಲಯದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಿವೆ. 2016ರ ಸೆಪ್ಟೆಂಬರ್‌ನಲ್ಲಿ ಭಾರತ ಮತ್ತು ಫ್ರಾನ್ಸ್ ಸರ್ಕಾರಗಳ ನಡುವೆ ಸರ್ಕಾರ-ಸರ್ಕಾರದ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಸುಮಾರು 59,000 ಕೋಟಿ ಮೊತ್ತದ ಈ ಒಪ್ಪಂದದಡಿಯಲ್ಲಿ 2022ರೊಳಗೆ ಎಲ್ಲಾ 36 ವಿಮಾನಗಳು ಭಾರತಕ್ಕೆ ವಿತರಿಸಲ್ಪಟ್ಟಿವೆ. ಹರಿಯಾಣದ ಅಂಬಾಲಾ ಮತ್ತು ಪಶ್ಚಿಮ ಬಂಗಾಳದ ಹಾಸಿಮಾರಾ ವಾಯುನೆಲೆಗಳಲ್ಲಿ ಇವುಗಳನ್ನು ನಿಯೋಜಿಸಲಾಗಿದೆ. ರಫೇಲ್ ಬಹುಮುಖಿ ಯುದ್ಧವಿಮಾನವಾಗಿದ್ದು, ದೀರ್ಘದೂರದ 'ಮೆಟಿಯರ್' ಗಗನ-ಗಗನ ಕ್ಷಿಪಣಿ, 'ಸ್ಕಾಲ್ಪ್' ನಿಖರ ದಾಳಿ ಕ್ಷಿಪಣಿ, ಅತ್ಯಾಧುನಿಕ ರಡಾರ್ ಮತ್ತು ಎಲೆಕ್ಟ್ರಾನಿಕ್ ಯುದ್ಧ ವ್ಯವಸ್ಥೆಗಳನ್ನು ಹೊಂದಿದೆ. ಗಡಿಭಾಗಗಳಲ್ಲಿ, ವಿಶೇಷವಾಗಿ ಲಡಾಖ್‌ನಂತಹ ಎತ್ತರ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಇದಕ್ಕಿದೆ.

3.25 ಲಕ್ಷ ಕೋಟಿ ರೂ. ವೆಚ್ಚ ದಲ್ಲಿ ಭಾರತೀಯ ವಾಯುಪಡೆಗೆ 114 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಭಾರತ ಅನುಮೋದಿಸಿದೆ. ಇದು ದೇಶದ ಇತಿಹಾಸದಲ್ಲಿಯೇ ಅತಿದೊಡ್ಡ ರಕ್ಷಣಾ ಖರೀದಿಯಾಗಿದ್ದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯ ರಕ್ಷಣಾ ಸ್ವಾಧೀನ ಮಂಡಳಿ ಈ ಅನುಮತಿಯನ್ನು ನೀಡಿದೆ. ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರನ್ ಫೆ.17 ರಂದು ದೆಹಲಿಗೆ ಭೇಟಿ ನೀಡುವ ಕೆಲವೇ ದಿನಗಳ ಮೊದಲು ಈ ಮಹತ್ವದ ಬೆಳವಣಿಗೆ ನಡೆದಿದೆ. ರಕ್ಷಣಾ ಸಚಿವಾಲಯದ ಅನುಮೋದನೆಯ ನಂತರ ಸ್ವಾಧೀನಕ್ಕೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಭದ್ರತೆ ಕುರಿತ ಸಂಪುಟ ಸಮಿತಿಯಿಂದ ಅಂತಿಮ ಅನುಮತಿ ಬೇಕಾಗುತ್ತದೆ. ಮೂಲಗಳ ಪ್ರಕಾರ ಈ ಪ್ರಸ್ತಾವನೆಯಲ್ಲಿ 18 ವಿಮಾನಗಳನ್ನು ಫ್ರೆಂಚ್ ರಕ್ಷಣಾ ಕಂಪನಿ ಡಸಾಲ್ಟ್ ಏವಿಯೇಷನ್‌ನಿಂದ ನೇರವಾಗಿ ಖರೀದಿಸ ಲಾಗುತ್ತದೆ. ಉಳಿದ 96 ಜೆಟ್‌ಗಳನ್ನು ಭಾರತದಲ್ಲಿ ತಯಾರಿಸಲಾಗುತ್ತದೆ. ಈ ಒಪ್ಪಂದವು ಸುಧಾರಿತ ಫೈಟರ್ ಜೆಟ್ ತಂತ್ರಜ್ಞಾನದ ವರ್ಗಾವಣೆಯನ್ನು ಒಳಗೊಂಡಿತ್ತು. ಟಾಟಾ ಅಡ್ವಾನ್ಸ್‌ಡ್ ಸಿಸ್ಟಮ್ಸ್‌ನಲ್ಲಿ 36 ರಫೇಲ್ ವಿಮಾನದ ಭಾಗಗಳನ್ನು ನಿರ್ಮಾಣ ಮಾಡಲಿದೆ. ಪ್ರಸ್ತುತ ಭಾರತದ ಬಳಿ 36 ರಫೇಲ್ ವಿಮಾನಗಳಿವೆ. ಫ್ರಾನ್ಸ್ ಬಳಿ 225 ವಿಮಾನಗಳಿವೆ. ಒಪ್ಪಂದದಂತೆ ಎಲ್ಲಾ ವಿಮಾನಗಳು ಭಾರತಕ್ಕೆ ಸಿಕ್ಕಿದರೆ ಫ್ರಾನ್ಸ್ ಬಳಿಕ ಅತಿ ಹೆಚ್ಚು ರಫೇಲ್ ವಿಮಾನ ಹೊಂದಿರುವ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಲಿದೆ.

ಡಸಾಲ್ಟ್ ಏವಿಯೇಶನ್ ಹಾಗೂ ಟಾಟಾ ಅಡ್ವಾನ್ಸ್‌ಡ್ ಸಿಸ್ಟಮ್ಸ್ ಲಿ (ಟಿಎಎಸ್ಎಲ್) 2025ರ ಜೂನ್‌ನಲ್ಲಿ 4 ಒಪ್ಪಂದಗಳಿಗೆ ಸಹಿ ಹಾಕಿತ್ತು. ಈ ಒಪ್ಪಂದದ ಅನ್ವಯ ಹೈದರಾಬಾದ್‌ನಲ್ಲಿ ಉತ್ಪಾದನಾ ಘಟಕವನ್ನು ನಿರ್ಮಿಸಿ ಯುದ್ಧ ವಿಮಾನದ ಬಿಡಿಭಾಗಗಳನ್ನು ನಿರ್ಮಾಣ ಮಾಡಲಾಗುತ್ತದೆ. ಈ ಘಟಕದಲ್ಲಿ ರಫೇಲ್ ಫ್ಯೂಸಲೇಜ್ ಅಂದರೆ ವಿಮಾನದ ಪ್ರಧಾನ ಭಾಗವನ್ನು ನಿರ್ಮಿಸಲಾಗುತ್ತದೆ. ಫ್ರಾನ್ಸ್‌ನ ಹೊರಗೆ ರಫೇಲ್ ಫ್ಯೂಸಲೇಜ್ ನಿರ್ಮಿಸುತ್ತಿರುವುದು ಇದೇ ಮೊದಲು ಎಂದು ಡಸಾಲ್ಟ್ ಸಂಸ್ಥೆ ತಿಳಿಸಿತ್ತು.

ರಫೇಲ್ ಒಪ್ಪಂದವು ದೇಶೀಯ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣ ವಾಗಿತ್ತು. ಬೆಲೆ ಹಾಗೂ ಆಫ್ಸೆಟ್ ಪಾಲುದಾರಿಕೆ ಕುರಿತು ವಿರೋಧ ಪಕ್ಷಗಳು ಪ್ರಶ್ನೆ ಎತ್ತಿದ್ದವು. ಆದರೆ ಕೇಂದ್ರ ಸರ್ಕಾರವು ಇದು ಪಾರದರ್ಶಕ ಮತ್ತು ತುರ್ತು ಅವಶ್ಯಕತೆಯ ಒಪ್ಪಂದ ಎಂದು ಸ್ಪಷ್ಟಪಡಿಸಿತು. ರಫೇಲ್ ಯುದ್ಧವಿಮಾನಗಳು ಭಾರತೀಯ ಸೇನೆಗೆ ಸೇರಿಲ್ಲ. ಅವುಗಳನ್ನು ಸಂಪೂರ್ಣವಾಗಿ ಭಾರತೀಯ ವಾಯು ಪಡೆಯೇ ನಿರ್ವಹಿಸುತ್ತದೆ. ಭೂಸೇನೆ ಕಾರ್ಯಾ ಚರಣೆಗಳಿಗೆ ಭಾರತೀಯ ಸೇನೆ ಹೊಣೆಗಾರ ವಾಗಿದ್ದು, ಗಗನಯುದ್ಧ ಕಾರ್ಯಾಚರಣೆಗಳು ವಾಯುಪಡೆಯ ಅಧೀನದಲ್ಲಿವೆ. ಇತ್ತೀಚೆಗೆ, ವಿಮಾನವಾಹಕ ನೌಕೆಗಳಿಗಾಗಿ ರಫೇಲ್-ಎಂ ಆವೃತ್ತಿ ಖರೀದಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಇದು ಖಚಿಜುಚಿಟ ಓಚಿತಿಥಿಗೆ ಮತ್ತಷ್ಟು ಬಲ ತುಂಬಲಿದೆ. ಒಟ್ಟಿನಲ್ಲಿ, ರಫೇಲ್ ಖರೀದಿ ಭಾರತದ ರಕ್ಷಣಾ ಸಾಮರ್ಥ್ಯವನ್ನು ಹೊಸ ಮಟ್ಟಕ್ಕೆ ಕೊಂಡೊಯ್ದ ಮಹತ್ವದ ತೀರ್ಮಾನವಾಗಿದ್ದು, ಗಡಿಭಾಗದ ಭದ್ರತಾ ಸವಾಲುಗಳಿಗೆ ತಕ್ಕ ಪ್ರತಿಕ್ರಿಯೆ ನೀಡುವ ಸಾಮರ್ಥ್ಯವನ್ನು ಹೆಚ್ಚಿಸಿದೆ ಮತ್ತು ಇದರ ಉಪಯೋಗವು ಯುದ್ಧಕಾಲದಲ್ಲಿ ಎಷ್ಟರ ಮಟ್ಟಿಗೆ ಭಾರತದ ಸೇನಾ ಸಾಮರ್ಥ್ಯವನ್ನು ಮುನ್ನಡೆಸುವಲ್ಲಿ ಕಾರ್ಯನಿರ್ವಹಿಸುತದೆ ಎಂದು ಕಾದುನೋಡಬೇಕಾಗಿದೆ.

# ಕಾಂತಿ ಸ್ವೀಟ್ಸ್: ಸಿಹಿ ಉದ್ಯಮದಲ್ಲೊಂದು ಕ್ರಾಂತಿ

ರುಚಿಕರ ಮತ್ತು ಸ್ವಾದಿಷ್ಟ ಸ್ವೀಟ್‌ಗಳು, ಸೇವರ್‌ಳು ಮತ್ತು ಮಿಠಾಯಿಗಳ ತಯಾರಿಕೆಯಲ್ಲಿ ಜನಪ್ರಿಯತೆ ಪಡೆದಿರುವ ಕಾಂತಿ ಸ್ವೀಟ್ಸ್ 1957ರಲ್ಲಿ ಸಿಹಿ ಉದ್ಯಮ ಆರಂಭಿಸಿತು. ಪಂಡಿತ್ ಜ್ಯೋತಿ ಸ್ವರೂಪ್ ಕರ್ಮಾ ಅವರು ಬೆಂಗಳೂರಿನ ಕೆಂಪೇಗೌಡ ವೃತ್ತದಲ್ಲಿ ಕಾಂತಿ ಸ್ವೀಟ್ ಮೀಟ್ ಸ್ಟಾಲ್' ಹೆಸರಿನಲ್ಲಿ ಮಳಿಗೆ ಆರಂಬಿಸಿದರು. 6 ಅಡಿ ಉದ್ದ ಮತ್ತು 6 ಅಡಿ ಅಗಲವಿದ್ದ ಈ ಕೌಂಟರ್ ಈಗಲೂ ಅದೇ ಸ್ಥಳದಲ್ಲಿ ರೂಪಾಂತರಗೊಂಡು ಮಾರಾಟ ನಡೆಸುತ್ತಿದೆ. ಪಂಡಿತ್ ಜ್ಯೋತಿ ಸ್ವರೂಪ್ ಶರ್ಮಾ ಅವರು ತಮ್ಮ ಸಹೋದರ ಶ್ರೀ ಕಾಂತಿಸ್ವರೂಪ್ ಶರ್ಮಾ ಅವರು ಹೆಸರನ್ನು ಈ ಅಂಗಡಿಗೆ ಇಟ್ಟರು.

ಪಂಡಿತ್‌ಜೀ ಅವರ ನಿಧನಾನಂತರ 1973 ರಲ್ಲಿ, ಕಾಂತಿ ಸ್ವೀಟ್ಸ್‌ನ ಸಂಸ್ಥಾಪಕರಾದ ಮಳಿಗೆಯ ಎರಡನೇ ತಲೆಮಾರಿನ ಮಾಲೀಕರಾದ ಶ್ರೀ ರಾಜೇಂದ್ರ ಪ್ರಸಾದ್ ಶರ್ಮಾ ತಮ್ಮ ಕುಟುಂಬದ ಈ ಉದ್ಯಮ ವನ್ನು ಮುನ್ನಡೆಸಲು ನಿರ್ಧರಿಸಿದರು. ಅವರ ಪುತ್ರ ಕಾಂತಿ ಸ್ವೀಟ್ಸ ವ್ಯವಸ್ಥಾಪಕ ನಿರ್ದೇಶಕ ಶೈಲೇಂದ್ರ ಶರ್ಮಾ ತಮ್ಮ ತಂದೆ ದಿವಂಗತ ರಾಜೇಂದ್ರ ಪ್ರಸಾದ್ ಶರ್ಮಾ ಅವರ ಆಶೀರ್ವಾದದೊಂದಿಗೆ ಯಶಸ್ವಿ ಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಗಾಂಧಿನಗರದ ಕೆ.ಜಿ. ವೃತ್ತದಲ್ಲಿ ಕೇವಲ ಒಂದು ಮಳಿಗೆಯಿಂದ ಪ್ರಸ್ತುತ ಕಾಂತಿ ಸ್ವೀಟ್ಸ್‌ನ 50 ಮಳಿಗೆಗಳು ಬೆಂಗಳೂರಿನಲ್ಲಿ ತನ್ನ ಗ್ರಾಹಕರಿಗೆ ಸಿಹಿಯನ್ನು ಪೂರೈಸುತ್ತಿದೆ. ಪ್ರಾಮಾಣಿಕ ಸೇವೆ, ಉತ್ತಮ ಗುಣಮಟ್ಟ ಹಾಗೂ ಸಾಟಿ ಇಲ್ಲದ ರುಚಿಯ ನಿರ್ವಹಣೆಯೊಂದಿಗೆ ಸಮ್ಮತ ಬೆಳೆಗೆ ಸಿಹಿ ತಿಂಡಿಗಳನ್ನು ಕಾಂತಿ ಸ್ವೀಟ್ಸ್ ಪೂರೈಸುತ್ತಿದೆ. ಪಶ್ಚಿಮ ಬಂಗಾಳ, ರಾಜಸ್ತಾನ, ದೆಹಲಿ ಮತ್ತು ಕರ್ನಾಟಕ ಸೇರಿದಂತೆ ಸಾಂಪ್ರದಾಯಿಕ ವೈವಿಧ್ಯಮಯ ಸ್ವಾದಿಷ್ಟ ತಿನಿಸುಗಳು ಕಾಂತಿ ಸ್ವೀಟ್ಸ್‌ನ ವಿಶೇಷತೆ.

ಇದಕ್ಕಾಗಿ ಸಿಹಿ ತಿನಿಸುಗಳ ವೈವಿಧ್ಯಮ ಉತ್ಪಾದನೆಯನ್ನು ನೋಡಿಕೊಳ್ಳಲು ಪ್ರಾದೇಶಿಕ ಪರಿಣಿತಿಯ ಪಾಕ ಪ್ರವೀಣರ ಮತ್ತು ಬಾಣಸಿಗರನ್ನು ಜಾಗ್ರತೆವಹಿಸಿ ನೇಮಕ ಮಾಡಲಾಗಿದೆ. ಕಾಂತಿ ಸ್ವೀಟ್ಸ ರುಚಿಯಲ್ಲಿ ಮಹತ್ವದ ಪಾತ್ರ ವಹಿಸುವ ಕಚ್ಚಾ ಪದಾರ್ಥಗಳ ಸ್ಥಿರ ಗುಣಮಟ್ಟ ನಿರ್ವಹಣೆಗೆ ಹೆಚ್ಚು ಆದ್ಯತೆ ನೀಡುವುದ ರೊಂದಿಗೆ ಸಾಮಗ್ರಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ವಿಶೇಷ ಸಮಾರಂಭ ಗಳಿಂದ ಜನಪ್ರಿಯ ಹಬ್ಬ-ಉತ್ಸವಗಳು ಹಾಗೂ ಸಂಕ್ರಾಂತಿ, ಹೋಲಿ, ರಕ್ಷಾ ಬಂಧನ್, ದಸರಾ ಮತ್ತು ದೀಪಾವಳಿಯಂಥ ಸಂಭ್ರಮಗಳಿಗೆ ವಿಶೇಷ ಸಿಹಿ ತಿನಿಸುಗಳು ಲಭ್ಯವಿರುವ ನಗರದ ಕೆಲವು ಮಳಿಗೆಗಳಲ್ಲಿ ಕಾಂತಿ ಸ್ವೀಟ್ಸ್ ಸಹ ಒಂದು ಯಾವುದೇ ಅಬ್ಬರದ ಬ್ರಾಂಡಿಂಗ್ ಅಥವಾ ಥಳ ಥಳ ಜಾಹಿರಾತು ಇಲ್ಲದೆ ನಡೆಸುತ್ತಿರುವ ಶೈಲೇಂದ್ರಶರ್ಮಾರವರು ಹೊಸ ಚೈತನ್ಯ ನೀಡಿದ್ದಾರೆ.

ಕಾಂತಿ ಸ್ವೀಟ್ಸ್ ಸಂಸ್ಥಾಪಕ ರಾಜೇಂದ್ರ ಪ್ರಸಾದ್ ಶರ್ಮ ಅವರ ಸುಮತ್ರರಾದ ಶೈಲೇಂದ್ರ ಕರ್ಮಾ ಇದರ ವ್ಯವಸ್ಥಾಪಕ ನಿರ್ದೇಶಕರು. ಕಳೆದ ಕೆಲವು ವರ್ಷಗಳಿಂದ ಸಿಹಿ ಉದ್ಯಮವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಶೈಲೇಂದ್ರ ಶರ್ಮಾ ಅವರು ಎಂಜಿನಿಯರಿಂಗ್ ಪದವೀಧರ ರಾಗಿದ್ದರೂ ತಮ್ಮ ತಂದೆಯವರು ಅಕ್ಕರೆಯಿಂದ ಸ್ಥಾಪಿಸಿದ ಕಾಂತಿ ಸ್ವೀಟ್ಸ್ ವ್ಯಾಪಾರ-ವಹಿವಾಟಿ ನಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿ ದ್ದಾರೆ. ಅಲ್ಲದೇ ತಮ್ಮ ತಂದೆಯವರ ಸಮಾಜ




ಸೇವಾ ಕಾರ್ಯಗಳನ್ನೂ ತಾವೇ ಮುಂದುವರಿಸಿ ಕೊಂಡು ಹೋಗುತ್ತಿದ್ದಾರೆ. ಇಂದು ಸಿಹಿ ಉದ್ಯಮವು ದೊಡ್ಡ ಮಟ್ಟದ ಪೈಪೋಟಿ ಎದುರಿಸುತ್ತಿದ್ದು, ಎಲ್ಲೆಡೆ ತೀವ್ರ ಸ್ಪರ್ಧೆಗಳ ನಡುವೆಯೂ ಕಾಂತಿ ಸ್ವೀಟ್ಸ್ ಮೊದಲಿನಿಂದಲೂ ಉತ್ಕೃಷ್ಟ ಗುಣಮಟ್ಟ ಮತ್ತು ಸ್ವಾದಿಷ್ಟ ರುಚಿಯನ್ನು ಕಾಯ್ದುಕೊಂಡಿದೆ. ಯಾವುದೇ ಕಲಬೆರಕೆ ಹಾಗೂ ಅಶುದ್ಧವಾದ ಪದಾರ್ಥಗಳಿಲ್ಲದೇ ಪರಿಶುದ್ಧವಾದ ವೈವಿಧ್ಯಮಯ, ವಿಭಿನ್ನ ತಿಂಡಿ ತಿನಿಸುಗಳು, ಸ್ವೀಟ್ಸ್ ಮತ್ತು ಸೇವರ್‌ಗಳನ್ನು ಇಲ್ಲಿ ಶುಚಿತ್ವದಿಂದ ರುಚಿಯಾಗಿ, ಅಚ್ಚುಕಟ್ಟಾಗಿ ತಯಾರಿಸಲಾಗುತ್ತದೆ. ಗುಣಮಟ್ಟದ ವಿಚಾರದಲ್ಲಂತೂ ಯಾವುದೇ ರಾಜಿ ಮಾಡಿಕೊಂಡಿಲ್ಲ.

ಈ ಉದ್ಯಮದ ಸ್ಪರ್ಧಾತ್ಮಕ ಸನ್ನಿವೇಶ ದಲ್ಲಿ ಕಳೆದ ಏಳು ದಶಕ ಗಳಿಂದಲೂ ಕಾಂತಿ ಸ್ವೀಟ್ಸ್ ತನ್ನದೇ ಆದ ಹೆಸರು ಗಳಿಸಿ ಮುಂಚೂಣಿಯಲ್ಲಿದೆ. ಇಲ್ಲಿನ ಸಿಹಿ ತಿನಿಸುಗಳು ಅಪಾರ ಜನಮೆಚ್ಚುಗೆಗೆ ಪಾತ್ರವಾಗಿದ್ದು, ಮನೆ ಮಾತಾಗಿದೆ. ಶುಚಿ-ರುಚಿ-ಸ್ವಾದಿಷ್ಟಕ್ಕೆ ಅನ್ವರ್ಥ ನಾಮವೇ ಕಾಂತಿ ಸ್ವೀಟ್ಸ್, ಆರೋಗ್ಯಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಉತ್ಕೃಷ್ಟ ಗುಣಮಟ್ಟದ ಪದಾರ್ಥಗಳಿಂದ ಸ್ವೀಟ್ಸ್ ಮತ್ತು ಸೇವರ್‌ಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಅಂದಿನಿಂದ ಇಂದಿನವರೆಗೆ ಅದೇ ಸ್ಥಾನ ಉಳಿಸಿಕೊಂಡು ಬಂದಿರುವ ಹೆಗ್ಗಳಿಕೆ ಕಾಂತಿ ಸ್ವೀಟ್ಸ್‌ನದ್ದು.

# ತಂದೆ ಯಾವಾಗಲೂ ತಂದೆಯಲ್ಲವೆ?



ಅದು ಬ್ಯಾಂಕ್‌ನ ಕ್ಯಾಶ್ ಕೌಂಟರ್ ರಶ್ ಇತ್ತು. ಅಲ್ಲಿ ಒಬ್ಬರು ಸುಮಾರು 75 ವರ್ಷದ ಅಜ್ಜ ಕೈಯ್ಯಲ್ಲಿ ಚೀಟಿಯೊಂದನ್ನು ಹಿಡಿದು ಬಂದಿದ್ದರು. ಕ್ಯಾಶಿಯರ್ ಅವರ ಅಕೌಂಟ್ ಚೆಕ್ ಮಾಡಿದರೆ ರೂ.660/– ಮಾತ್ರ ಇತ್ತು. ಕಳೆದ 2 ತಿಂಗಳಿಂದ 15 ಲಕ್ಷದ ಹೋಂಲೋನ್‌ನ ರೂ.14,000/– ಇಂಐ ಕಟ್ಟಿರಲಿಲ್ಲ. ಆ ಮನುಷ್ಯ ಪದೇ ಪದೇ ಕೇಳುತ್ತಿದ್ದ ಸಿಟ್ಟಿನಲ್ಲಿದ್ದ ಕ್ಯಾಶಿಯರ್ "ಏನಜ್ಜ 2 ತಿಂಗಳಿಂದ ಇಂಐ ಕಟ್ಟಿಲ್ಲ, ಅಕೌಂಟ್‌ನಲ್ಲಿ ಹಣ ಇಲ್ಲ, ಏನಾಗಿದೆ ನಿಮಗೆ? "ಮತ್ತೆ ಕೂಗಿದ.. ನೋಡಿ ನಮ್ಮ ಮಗ ಅಕೌಂಟ್‌ಗೆ ಹಣ ಹಾಕಿರ್ತಾನೆ ಚೆಕ್ ಮಾಡಿ ಅಜ್ಜ ಮೆಲ್ಲಗೆ ಹೇಳಿದಾಗ ಈ ಬಾರಿ ಕ್ಯಾಶಿಯರ್‌ನ ಬಿಪಿ ಏರಿತ್ತು..

ನೋಡಿ ಅಜ್ಜ ಹೇಳಿದ್ದೇ ಹೇಳುತ್ತೀರಲ್ವ, ತಲೆ ಸರಿ ಇಲ್ವಾ?, ನಿಮ್ಮ ಮಗ ಹಣ ಹಾಕಿಲ್ಲ ಅಕೌಂಟ್ ಅಲ್ಲಿ ಹಣ ಇಲ್ಲ.. ಎಲ್ಲೆಲ್ಲಿಂದ ಬರ್ತೀರಾ ನೀವೆಲ್ಲ".... ಅಂತ ಜೋರಾಗಿ ಕೂಗಿದ. ಆ ಸ್ವರ ಇಡೀ ಬ್ಯಾಂಕ್‌ಗೆ ಪ್ರತಿಧ್ವನಿಸಿತ್ತು. ಎಲ್ಲರೂ ಆ ವೃದ್ಧರನ್ನು ಅಸಹ್ಯವಾಗಿ ನೋಡುತ್ತಿದ್ದರು. ವೃದ್ಧರಿಗೆ ನಾಚಿಕೆಯಾಗಿದ್ದು ಅಲ್ಲೇ ಸೈಡ್‌ಗೆ ಹೋಗಿ ತಮ್ಮ ಮೊಬೈಲ್‌ನಲ್ಲಿ ಮಗನ ಸಂಖ್ಯೆಗೆ ಕಾಲ್ ಮಾಡುತಿದ್ದರು.. ಕರೆ ಸ್ವೀಕರಿಸುತ್ತಿರಲಿಲ್ಲ. ಕ್ಯಾಶಿಯರ್‌ನ ಸಿಟ್ಟು ತಗ್ಗಿರಲಿಲ್ಲ. "ನೋಡಿ ಅಜ್ಜ ನಿಮ್ಮ ಹೋಂ ಲೋನ್ ಮುಗಿಯಲು 7 ಕಂತು ಬಾಕಿ ಇದೆ, ಈಗಾಗಲೇ 2 ಕಂತು ಕಟ್ಟಿಲ್ಲ ಮುಂದಿನ ತಿಂಗಳು ಕಟ್ಟದಿದ್ದಲ್ಲಿ ಮನೆ ಜಪ್ತಿ ಮಾಡುತ್ತೇವೆ ನೋಡಿ ಆಗಲೇ ನಿಮ್ಮಂಥವರಿಗೆ ಬುದ್ದಿ ಬರುವುದು ಎಂದು ಸಿಟ್ಟಲ್ಲಿ ಹೇಳಿದ.

ಅಜ್ಜನ ಕಣ್ಣುಗಳು ಮಂಜಾಗಿದ್ದವು. ಮತ್ತೆ ಮತ್ತೆ ಅದೇ ನಂಬರ್‌ಗೆ ಕಾಲ್ ಮಾಡುತಿದ್ದರು. ಆದರೆ ಇದನ್ನೆಲ್ಲಾ ವೀಕ್ಷಿಸುತಿದ್ದ ಅದೇ ಬ್ಯಾಂಕಿನ ಸಹುದ್ಯೋಗಿಯೊಬ್ಬರು ಅಜ್ಜನಲ್ಲಿ ಬಂದರು. ಅಜ್ಜನನ್ನು ಪಕ್ಕಕ್ಕೆ ಕರೆಸಿಕೊಂಡು ನಿಮ್ಮ ಮಗನ ನಂಬರ್ ಕೊಡಿ ಎಂದು ತಾವೇ ತಮ್ಮ ಫೋನ್‌ನಿಂದ ರಿಂಗ್ ಮಾಡಿದಾಗ ಆಶ್ಚರ್ಯ ಎಂಬಂತೆ ಫೋನ್ ರಿಂಗ್ ಆಗಿತ್ತು. ಹಲೋ ಎಂಬ ಹೆಂಗಸಿನ ಧ್ವನಿ ಅವರನ್ನು ಆಶ್ಚರ್ಯಗೊಳಿಸಿತ್ತು ಅಜ್ಜ ಇದು ಮಗನ ನಂಬರ್ ಎಂದು ಅವರಿಗೆ ತಿಳಿಸಿದರು. ಆ ಹೆಂಗಸಿನ ಧ್ವನಿ ಬದಲಾಗಿತ್ತು ಆಕೆ ಅಳುತ್ತಿದ್ದಳು. ಒಂದು ಕ್ಷಣ ಸ್ತಬ್ಧವಾಗಿದ್ದು. ಆಕೆ ಮುಂದುವರಿಸಿದಳು... "ಹಾ ಸಾರ್, ನಾನು ರೂಪ, ಅವರ ಮಗನ ಹೆಂಡತಿ. ಅವರು ನಮ್ಮ ಮಾವ.. ನನ್ನ ಗಂಡನ ತಂದೆ, ಅಲ್ಲಿ ಅವರ ಮನೆ ಕಟ್ಟಿದ್ದು, ತಂದೆ ತಾಯಿಯರನ್ನು ನೋಡಿಕೊಂಡಿದ್ದು, ಮನೆ ನೋಡಿಕೊಂಡಿದ್ದು, ಮನೆಯ ಹೋಂಲೋನ್ ಕಟ್ಟುತಿದ್ದರು. ಎಲ್ಲವೂ ನನ್ನ ಗಂಡನೇ ಮಾಡುತ್ತಿದ್ದರು. ಕಳೆದ ತಿಂಗಳು ನಾನು, ಅವರು ಸಿಟಿಯಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ಬೈಕ್ ಆಕ್ಸಿಡೆಂಟ್ ಆಗಿ ನನ್ನ ಯಜಮಾನರು ತೀರಿಕೊಂಡರು. ಆಕೆಯ ಅಳು ಜೋರಾಗಿತ್ತು, ಹಾ.. ನಮ್ಮ ಮಾವನವರಿಗೆ ಅವರು ಒಬ್ಬನೇ ಮಗ, ಈಗ ಯಾರೂ ಇಲ್ಲ ಅವರಿಗೆ ಮಗ ಸತ್ತದ್ದು ಹಾಗೂ ಮಗ ಇಲ್ಲ ಎನ್ನುವುದು ಯಾವುದೂ ಅವರಿಗೆ ನೆನಪಿಲ್ಲ. ಪದೇ ಪದೇ ಮಗನ ನಂಬರ್‌ಗೆ ಫೋನ್ ಮಾಡುತ್ತಿದ್ದರು, ನನ್ನ ಎಲ್ಲಾ ಚಿನ್ನ ಮನೆ ಕಟ್ಟಲು ಬಳಸಿದ್ದರು ಈಗ ಅವರೂ ಇಲ್ಲ, ಚಿನ್ನವೂ ಇಲ್ಲ, ಕಳೆದ 14 ವರ್ಷಗಳಿಂದ ಒಂದೇ ಒಂದು ಇಂಐ ತಪ್ಪಿಸಿರಲಿಲ್ಲ. ನಾನೀಗ ಇಬ್ಬರು ಮಕ್ಕಳೊಂದಿಗೆ ತವರು ಮನೆಯಲ್ಲಿದ್ದೇನೆ, ಇನ್ನೂ ಮುಂದೆ ಮಕ್ಕಳ ಭವಿಷ್ಯ ಹಾಗೂ ನನ್ನ ಜೀವನ ನಡೆಯಬೇಕಿದೆ. ಹಾಗಾಗಿ ಮಾವನವರಿಗೆ ನಾನೇನೂ ಸಹಾಯ ಮಾಡಲಾಗುತ್ತಿಲ್ಲ, ಪದೇ ಪದೇ ಮಗನಿಗೆ ಹೇಳಮ್ಮ ಎನ್ನುವಾಗ ಕರುಳು ಕಿತ್ತು ಬರುತಿತ್ತು. ಅದಕ್ಕೇ ಅವರ ನಂಬರ್ ಬ್ಲಾಕ್ ಮಾಡಿದ್ದೇನೆ ಎನ್ನುವಾಗ ಆಕೆಯ ಅಳು ಮತ್ತಷ್ಟು ಹೆಚ್ಚಿತ್ತು. ಮತ್ತೆ ಮಾತಾಡುವ ಧೈರ್ಯ ಫೋನ್ ಮಾಡಿದವರಿಗೂ ಇರಲಿಲ್ಲ. ಅಷ್ಟರಲ್ಲಿ ಫೋನ್ ಕಟ್ ಆಗಿತ್ತು. ಆ ಸಹುದ್ಯೋಗಿಯ ಕಣ್ಣಲ್ಲೂ ನೀರಿತ್ತು.. ಫೋನ್ ಹಿಡಿದು ಮಾತನಾಡುತ್ತಾ ಹೊರಗೆ ಬಂದ ಆತ ಒಳ ಹೋಗುತ್ತಿದ್ದಂತೆ ಬಾಗಿಲ ಬಳಿ ಕಾಯುತ್ತಿದ್ದ ವೃದ್ಧರು "ನಮ್ಮ ಮಗ ಏನಂದ?" ತೀವ್ರ ಕುತೂಹಲದಿಂದ ಪದೇ ಪದೇ ಕೇಳುತ್ತಿದ್ದರು. ಬ್ಯಾಂಕಿನ ಸಿಬ್ಬಂದಿ ಬನ್ನಿ ಸರ್ ಎಂದು ಅವರನ್ನು ತಮ್ಮ ಕೌಂಟರ್‌ನತ್ತ ಕರೆದೋಯ್ದರು.

ಮತ್ತೆ ಅಜ್ಜ ಬ್ಯಾಂಕಿನೊಳಗೆ ಬಂದದ್ದು ನೋಡಿ ಆ ಕ್ಯಾಶಿಯರ್‌ಗೆ ಸಿಟ್ಟು ಬಂತು, ಅವರ ಸಹೋದ್ಯೋಗಿ ಕ್ಯಾಶಿನರ್‌ನಲ್ಲಿ ಕೇಳಿದ "ಅಜ್ಜನ ಲೋನ್ ಸ್ಟೇಟ್ಮೆಂಟ್ ಕೊಡಿ" ಎಂದು. ಅಜ್ಜ ಮತ್ತೆ ಕೇಳಿದರು "ಸರ್ ಮಗ ಏನಂದ?", ಈ ಬಾರಿ ಅವರ ಕಣ್ಣುಗಳಲ್ಲಿ ಆತಂಕವಿತ್ತು.

ಸ್ಟೇಟ್‌ಮೆಂಟ್ ಮೇಲೆ ಕಣ್ಣಾಡಿಸಿದ ಬ್ಯಾಂಕ್ ಸಹೋದ್ಯೋಗಿ, 15 ಲಕ್ಷದ 15 ವರ್ಷದ ಲೋನ್ ಅದಾಗಿತ್ತು 6 ತಿಂಗಳಷ್ಟೇ ಬಾಕಿ ಇತ್ತು, 2 ತಿಂಗಳು ಕಟ್ಟಿರಲಿಲ್ಲ.. ಕ್ಯಾಲ್ಕುಲೇಟರ್ ಹಿಡಿದು ಲೆಕ್ಕ ಹಾಕಿದರು ಬಡ್ಡಿ ಕೂಡಿಕೊಂಡು ರೂ.98 ಸಾವಿರ ಅಷ್ಟೇ ಬಾಕಿ ಇತ್ತು ನಗುತ್ತಾ ಅಜ್ಜನಲ್ಲಿ ಹೇಳಿದರು.. "ಅಯ್ಯೋ ಅಜ್ಜ ನಿಮ್ಮ ಮಗ ಈಗಷ್ಟೇ ಹಣ ಹಾಕಿದ.. ನಿಮಗೆ ಇನ್ನೊಂದು ಗುಡ್ ನ್ಯೂಸ್ ಇದೆ ನಿಮ್ಮ ಬಾಕಿ ಇರುವ ಕಂತಿನ ಹಣವನ್ನು ಒಟ್ಟಾಗಿ ಹಾಕಿದ್ದಾನೆ, ನಿಮ್ಮ ಲೋನ್ ಕ್ಲೋಸ್ ಆಗಿದೆ, ನೀವಿನ್ನು ನಿಶ್ಚಿಂತೆಯಲ್ಲಿ ಮನೆಗೆ ಹೋಗಬಹುದು, ಲೋನ್ ಕ್ಲೀಯರೆನ್ಸ್ ಸರ್ಟಿಫಿಕೇಟ್ ಬ್ಯಾಂಕ್ ನಿಮ್ಮ ಮನೆಗೆ ಕಳಿಸುತ್ತದೆ" ಎಂದಾಗ ಅಜ್ಜನ ಆತಂಕದ ಮುಖದಲ್ಲಿ ನಗುವಿತ್ತು, ಕೈ ಮುಗಿದು ನಿಂತರು. ತುಂಬಾ "ಉಪಕಾರ ಆಯಿತು ಸರ್" ಎಂದಾಗ, ಉಪಕಾರ ನನಗಲ್ಲ ನಿಮ್ಮ ಮಗನಿಗೆ ಹೇಳಿ ಎಂದು ನಕ್ಕರು ಆ ಸಹೋದ್ಯೋಗಿ. ಅಜ್ಜನ ಮುಖದಲ್ಲಿ ಗೆಲುವಿನ ನಗುವಿತ್ತು.

ಅಲ್ಲೇ ಇದ್ದ ಕ್ಯಾಶಿಯರ್ ಈ ಬಾರಿ, ಭಾರಿ ಸಿಟ್ಟಿನಲ್ಲಿದ್ದ ತನ್ನ ಸಹೋದ್ಯೋಗಿ ಮೇಲೆ "ನಿಂಗೇನು ಹುಚ್ಚು ಹಿಡಿದಿದ, ಹಣ ಅವರ ಮಗ ಹಾಕೇ ಇಲ್ಲ ಎಂದಾಗ ಕೂಲ್ ಆಗಿ ನಕ್ಕು ಉತ್ತರಿಸಿದ. ಕ್ಯಾಶಿಯರ್ ಕೂಗಾಟ ಬ್ಯಾಂಕ್ ಸಹೋದ್ಯೋಗಿಗಳು ಮತ್ತು ಒಳಗಿಂದ ಮ್ಯಾನೇಜರ್ ಕೂಡಾ ಕೇಳಿಸಿಕೊಂಡಿದ್ದರು. ಆಶ್ಚರ್ಯಚಕಿತವಾಗಿ ಬ್ಯಾಂಕ್ ಸಹೋದ್ಯೋಗಿ ತನ್ನ ಪರ್ಸಿನಿಂದ ರೂ.7000 ಟೇಬಲ್ ಮೇಲೆ ಇಟ್ಟು ಹೀಗೆ ಹೇಳಿದ "ನನಗೆ ಹುಚ್ಚು ಇದೆಯೋ ಇಲ್ಲವೋ ಗೊತ್ತಿಲ್ಲ ಆದರೆ ತೀರಿಹೋಗಿದ್ದ ಮಗ ಇದ್ದಾನೆಂದು ಭಾವಿಸಿ ಈ ತಂದೆ ಮಗನ ಮೇಲೆ ಇಟ್ಟಿರುವ ವಿಶ್ವಾಸವನ್ನು ಆ ಕ್ಷಣದಲ್ಲಿ ಉಳಿಸುವುದು, ಆ ತಂದೆಯ ಕಣ್ಣುಗಳಲ್ಲಿ ಇದ್ದ ಆಸೆಯನ್ನು ಹಾಗೇ ಉಳಿಸುವುದಷ್ಟೇ ಈ ಸಂದರ್ಭದಲ್ಲಿ ನನ್ನೆದುರಿದ್ದ ಸವಾಲಾಗಿತ್ತು. ಯಾಕೆಂದರೆ ಆತ ನನ್ನೆದುರು ಕೇವಲ ಒಬ್ಬ ತಂದೆಯಾಗಿದ್ದ, ಯಾರ ತಂದೆ ಎನ್ನುವುದು ಮುಖ್ಯವಾಗಿರಲಿಲ್ಲ, ಮಗನ ಮೇಲಿಟ್ಟಿದ್ದ ಆ ವಿಶ್ವಾಸ ಉಳಿಸಿದ್ದು ಅದಕ್ಕೇ ಪ್ರತಿಯಾಗಿ ಆ ತಂದೆಯ ಕಣ್ಣಲ್ಲಿದ್ದ ಆ ಸಂತೋಷದೆದುರು, ನನ್ನಲ್ಲಿದ್ದ ಲಕ್ಷ ರೂಪಾಯಿ ಕೂಡ ಬಹಳ ಚಿಕ್ಕದಾಗಿ ಕಾಣುತ್ತಿತ್ತು. ನನಗೆ ನಾನು ಮಾಡಿದ ಕೆಲಸದಿಂದ ಸಿಕ್ಕಿದ ನೆಮ್ಮದಿ ಬಹುಶಃ ಕೋಟಿ ರೂಪಾಯಿ ಸಿಕ್ಕಿದ್ದರೂ ಈ ಸಂತೋಷ ಸಿಗಲು ಸಾಧ್ಯವೇ ಇಲ್ಲ ಎನ್ನಿಸಿತ್ತು" ಎಂದವನೇ ಮಿಕ್ಕುಳಿದ ರೂ.90,000/– ಚೆಕ್ ಕೊಡಲು, ಚೆಕ್ ಬುಕ್ ತರಲು ಹೊರಗಡೆ ಹೋದ. ಸಹೋದ್ಯೋಗಿ ಚೆಕ್ ಪುಸ್ತಕ ತರುವಾಗ 20/22 ಜನರಿರುವ ಬ್ಯಾಂಕ್‌ನ ಎಲ್ಲಾ ಸಿಬ್ಬಂದಿಗಳು ಎದ್ದು ನಿಂತು ಚಪ್ಪಾಳೆ ಹೊಡೆಯುತ್ತಿದ್ದರು, ಅಷ್ಟರಲ್ಲಿ ಬ್ಯಾಂಕಿನ ಒಂದಷ್ಟು ಸಿಬ್ಬಂದಿಯವರು ಕ್ಯಾಶಿಯರ್ ಟೇಬಲ್ ಮೇಲೆ ಒಂದಷ್ಟು ಹಣ ಇಟ್ಟಿದ್ದರು. ಲೆಕ್ಕ ಮಾಡಿದ ಕ್ಯಾಶಿಯರ್ ಬರೋಬ್ಬರಿ ರೂ.73,000/– ಸೇರಿಸಲಾಗಿದ್ದು ನೋಡಿ ಅಷ್ಟರಲ್ಲಿ ಆಗ ವೃದ್ಧರಿಗೆ ಬೈದಿದ್ದ ಕ್ಯಾಶಿಯರ್ ಕೂಡ ರೂ.7000/– ಕೂಡ ಸೇರಿಸಿದ್ದರು. ಒಟ್ಟಾರೆ ರೂ.87000 ಸಂಗ್ರಹವಾಗಿದ್ದು ನೋಡಿ ಉಳಿದ ರೂ.11,000/– ಚೆಕ್ ಬರೆಯಲು ಪೆನ್ನು ತೆಗೆದವನ ಹೆಗಲ ಮೇಲೆ ಕೈಯೊಂದು ಬಿತ್ತು, ತಿರುಗಿ ನೋಡಿದ ಸಹೋದ್ಯೋಗಿಗೆ ಅಲ್ಲಿ ಬ್ರಾಂಚ್ ಮ್ಯಾನೇಜರ್ ನಿಂತಿದ್ದು ಕಂಡು ಬಂತು "ನನ್ನನ್ನು ಬಿಟ್ಟು ನೀವೇ ಎಲ್ಲಾ ಪುಣ್ಯ ಹಂಚಿಕೊಂಡರೆ ಹೇಗೆ? ನನ್ನದೂ ಸ್ವಲ್ಪ ಪುಣ್ಯ ಇರಲಿ ಎಂದವರೇ ರೂ.11,000/– ನಗದು ಕೊಟ್ಟು ಚೆಕ್ ಪುಸ್ತಕ ಮಡಚಿಟ್ಟರು. ಆ ತಂದೆ ಮಗನ ಮೇಲೆ ಇಟ್ಟಿದ್ದ ವಿಶ್ವಾಸಕ್ಕೆ ಬ್ಯಾಂಕಿನ ಎಲ್ಲಾ ಸಿಬ್ಬಂದಿ ಒಟ್ಟಾಗಿ ಸೇರಿ ಮಗನ ಮೇಲಿನ ತಂದೆಯ ನಂಬಿಕೆ ಉಳಿಸಿಬಿಟ್ಟಿದ್ದರು.

ಸಹಾಯ ಮಾಡುವ ಅವಕಾಶ ಭಗವಂತ ಪ್ರತಿಯೊಬ್ಬನಿಗೂ ಒದಗಿಸುತ್ತಾನೆ. ಆದರೆ ಆ ಕ್ಷಣ ಉಪಯೋಗಿಸಿಕೊಂಡವನಿಗಷ್ಟೇ ಅದರ ನಿಜ ಸುಖದ ಅನುಭವವಾಗಲಿದೆ. ಇಲ್ಲಿ ಆ ಬ್ಯಾಂಕ್ ಸಹೋದ್ಯೋಗಿಗಳಿಗೆ ಆ ಕ್ಷಣ ಒದಗಿ ಬಂದಿತ್ತು. ದಯವಿಟ್ಟು ನಿಮ್ಮ ಬ್ಯಾಂಕ್‌ಗೆ ಅಥವಾ ಸರ್ಕಾರಿ ಕಛೇರಿ ಅಥವಾ ಖಾಸಗಿ ಕಛೇರಿಗಳಿಗೆ ಬರುವ ಹಿರಿಯ ಜೀವಗಳಿಗೆ ನಿರಾಸೆ ಮಾಡಬೇಡಿ, ಅವಮಾನ ಮಾಡಲೇಬೇಡಿ ಯಾಕೆಂದರೆ ನಿಮ್ಮಲ್ಲಿ ಬರುವ ಹಿರಿಯ ಜೀವಗಳಿಗೆ ನೀವು ಕೊಡುವ ಆ ಹಣದ ಅವಶ್ಯಕತೆ ಅದೆಷ್ಟು ಇರುತ್ತದೋ ಯಾರಿಗೊತ್ತು ಅಲ್ಲವೇ?..... ಆತ ಕೊಳೆಯಾದ ಅಂಗಿ, ಕೊಳೆಯಾದ ಪ್ಯಾಂಟ್, ಪೈಜಾಮ, ಲುಂಗಿ, ಹರಿದ ಚಪ್ಪಲ್, ಚಪ್ಪಲ್ ಇಲ್ಲದ ಕಾಲು ಹೇಗೇ ಬಂದಿರಲಿ ಪ್ರೀತಿಯಿಂದ ಸೌಜನ್ಯದಿಂದ ಮಾತಾಡಿ.. ಫಾರಂ ಫಿಲ್ ಮಾಡಲು ನೆರವಾಗಿ... ಯಾಕೆಂದರೆ.... ನೆನಪಿರಲಿ ಯಾರದ್ದಾದರೇನು? ತಂದೆ.. ತಂದೆಯಲ್ಲವೇ??


ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ನಂ.16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080

ದೂರವಾಣಿ ಸಂಖ್ಯೆ: 080-22205189/93 ಇ-ಮೇಲ್ ವಿಳಾಸ: sec.karnataka@ka.gov.in

## ಪ್ರಕಟಣೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿಯಲ್ಲಿ ರಚನೆಯಾಗಿರುವ 05 ನಗರಪಾಲಿಕೆಗಳಾದ

(1) ಬೆಂಗಳೂರು ಕೇಂದ್ರ (2) ಬೆಂಗಳೂರು ಉತ್ತರ (3) ಬೆಂಗಳೂರು ದಕ್ಷಿಣ (4) ಬೆಂಗಳೂರು ಪೂರ್ವ ಮತ್ತು (5) ಬೆಂಗಳೂರು ಪಶ್ಚಿಮ ನಗರಪಾಲಿಕೆಗಳಲ್ಲಿ ಇರುವ 369 ವಾರ್ಡ್‌ಗಳಿಗೆ ದಿನಾಂಕ: 19.01.2026 ರಂದು ಮತದಾರರ ನೋಂದಣಾಧಿಕಾರಿಗಳು ಸಂಬಂಧಪಟ್ಟ ವಾರ್ಡ್‌ವಾರು ವ್ಯಾಪ್ತಿಯ ಮತಗಟ್ಟೆಗಳಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿರುತ್ತಾರೆ, ತದನಂತರ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಸರಿಪಡಿಸಿ ದಿನಾಂಕ: 09.03.2026 ರಂದು ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಮತದಾರರು ತಮ್ಮ ವಾರ್ಡಿನ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳು ಇರುವ ಬಗ್ಗೆ ಪರಿಶೀಲಿಸಿಕೊಂಡು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 10.03.2026 ರಿಂದ 16.03.2026 ರೊಳಗೆ ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.




ಈ ಕೆಳಕಂಡ ಸಹಾಯವಾಣಿಗೆ ಸಂಪರ್ಕಿಸಬಹುದಾಗಿದೆ

| ಕ್ರ. ಸಂ. | ನಗರ ಪಾಲಿಕೆ | ಸಹಾಯವಾಣಿ |
|---|---|---|
| 1 | ಬೆಂಗಳೂರು ಕೇಂದ್ರ ನಗರಪಾಲಿಕೆ | 080–22975803 |
| 2 | ಬೆಂಗಳೂರು ಉತ್ತರ ನಗರಪಾಲಿಕೆ | 080–22975936 |
| 3 | ಬೆಂಗಳೂರು ದಕ್ಷಿಣ ನಗರಪಾಲಿಕೆ | 080–26566362/9480685704 |
| 4 | ಬೆಂಗಳೂರು ಪೂರ್ವ ನಗರಪಾಲಿಕೆ | 9480685706 |
| 5 | ಬೆಂಗಳೂರು ಪಶ್ಚಿಮ ನಗರಪಾಲಿಕೆ | 9480685703 |

# ದೆಹಲಿ ಮೆಟ್ರೋದಲ್ಲಿ 'ಸರ್ ಎಂ. ವಿಶ್ವೇಶ್ವರಯ್ಯ' ಹೆಸರು: ಮಹಾನ್ ಇಂಜಿನಿಯರ್‌ಗೆ ಗೌರವ



**ಭಾ**ರತದ ಅಗ್ರಗಣ್ಯ ನಾಗರಿಕ ಇಂಜಿನಿಯರ್‌ಗಳಲ್ಲೊಬ್ಬರಾದ Sir Mokshagundam Visvesvaraya ಅವರ ಹೆಸರನ್ನು ಆಧರಿಸಿದ ಮೆಟ್ರೋ ನಿಲ್ದಾಣವು ಉತ್ತರ ಭಾರತದ ನಮ್ಮ ದೆಹಲಿಯಲ್ಲಿ ಉದ್ಘಾಟನೆಯಾಗಿದೆ. Delhi Metro ಯ ಪಿಂಕ್ ಲೈನ್‌ನಲ್ಲಿರುವ "ಸರ್ ಎಂ. ವಿಶ್ವೇಶ್ವರಯ್ಯ ಮೋತಿ ಬಾಗ್" ಮೆಟ್ರೋ ನಿಲ್ದಾಣವು ದೆಹಲಿಯ ದಕ್ಷಿಣ ಭಾಗದಲ್ಲಿರುವ ಮೋತಿ ಬಾಗ್ ಪ್ರದೇಶದ ರಿಂಗ್ ರೋಡ್‌ನಲ್ಲಿ ನಿರ್ಮಾಣಗೊಂಡು ಪ್ರಯಾಣ ಚಾಲನೆ 2018 ರಿಂದ ಪ್ರಾರಂಭಗೊಂಡಿದೆ.

ಈ ನಿಲ್ದಾಣವು ಪಿಂಕ್ ಲೈನ್‌ನ ನಾಲ್ಕು ಹೊಸ ಮೆಟ್ರೋ ನಿಲ್ದಾಣಗಳೊಂದಿಗೆ ಒಂದೇ ದಿನ ಸಾರ್ವಜನಿಕರಿಗೆ ತೆರೆಯಲ್ಪಟ್ಟದ್ದು ವಿಶೇಷ. ದೇಶದ ನಿರ್ಮಾಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಮಹಾನ್ ಇಂಜಿನಿಯರ್‌ಗೆ ಸಲ್ಲಿಸಿದ ಗೌರವವಾಗಿ ಈ ನಿಲ್ದಾಣಕ್ಕೆ ಅವರ ಹೆಸರು ನೀಡಲಾಗಿದೆ.

ಇಂಜಿನಿಯರಿಂಗ್ ಲೋಕದ ದಿಗ್ಗಜ Sir Mokshagundam Visvesvaraya (1861–1962) ಭಾರತ ಇತಿಹಾಸದಲ್ಲಿ ಅತ್ಯಂತ ಹೆಸರುವಾಸಿ ಮತ್ತು ಪ್ರಭಾವಶಾಲಿ ಇಂಜಿನಿಯರ್‌ಗಳಲ್ಲೊಬ್ಬರು. ಬ್ರಿಟಿಷರ ಆಳ್ವಿಕೆಯ ಕಾಲದಿಂದ ಹಿಡಿದು ಸ್ವತಂತ್ರ ಭಾರತದ ಆರಂಭಿಕ ವರ್ಷಗಳವರೆಗೆ ಅವರು ದೇಶದ ಮೂಲ ಸೌಕರ್ಯ ಅಭಿವೃದ್ಧಿಗೆ ಅಮೂಲ್ಯ ಸೇವೆ ಸಲ್ಲಿಸಿದರು.

ಅವರ ಪ್ರಮುಖ ಸಾಧನೆಗಳಲ್ಲಿ ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿರುವ Krishna Raja Sagara Dam ನಿರ್ಮಾಣದ ಮೇಲ್ವಿಚಾರಣೆ ಮತ್ತು Hyderabad ನಗರಕ್ಕೆ ಪ್ರವಾಹ ನಿರ್ವಹಣಾ ವ್ಯವಸ್ಥೆ ರೂಪಿಸಿರುವುದು ಪ್ರಮುಖವಾಗಿವೆ. ಅವರ ಇಂಜಿನಿಯರಿಂಗ್ ಕೌಶಲ್ಯ ಹಾಗೂ ಸೇವೆಯನ್ನು ಗಮನಿಸಿ ಬ್ರಿಟನ್‌ನ ರಾಜ George V. ಅವರು ಅವರಿಗೆ "Sir Knighthood" ಎಂಬ ಗೌರವ ಪದವಿಯನ್ನು ನೀಡಿದರು.

ಭಾರತದಲ್ಲಿ ಅವರನ್ನು "ಇಂಜಿನಿಯರ್‌ಗಳ ಪಿತಾಮಹ" ಎಂದು ಗೌರವದಿಂದ ಕರೆಯಲಾಗುತ್ತದೆ. ಅವರ ಜನ್ಮದಿನವಾದ ಸೆಪ್ಟೆಂಬರ್ 15 ಅನ್ನು ದೇಶಾದ್ಯಂತ Engineers' Day ಎಂದು ಆಚರಿಸಲಾಗುತ್ತದೆ.

Delhi Metro ಯ ಪಿಂಕ್ ಲೈನ್ ಸುಮಾರು 59.2 ಕಿಲೋಮೀಟರ್ ಉದ್ದ ಹೊಂದಿದ್ದು, ಇದು ಮೆಟ್ರೋ ವ್ಯವಸ್ಥೆಯಲ್ಲೇ ಅತಿ ಉದ್ದದ ಮಾರ್ಗವಾಗಿದೆ. ಈ ಮಾರ್ಗದಲ್ಲಿ ಒಟ್ಟು 38 ನಿಲ್ದಾಣಗಳು ಇದ್ದು, ಅವುಗಳಲ್ಲಿ 26 ಎಲಿವೇಟೆಡ್ ಹಾಗೂ 12 ಭೂಗರ್ಭ ನಿಲ್ದಾಣಗಳು ಆಗಿವೆ. "ಸರ್ ಎಂ. ವಿಶ್ವೇಶ್ವರಯ್ಯ ಮೋತಿ ಬಾಗ್" ನಿಲ್ದಾಣವು ಎಲಿವೇಟೆಡ್ ನಿಲ್ದಾಣಗಳಲ್ಲಿ ಒಂದಾಗಿದೆ.



ಈ ನಿಲ್ದಾಣಕ್ಕೆ ಮಹಾನ್ ಇಂಜಿನಿಯರ್‌ರ ಹೆಸರು ನೀಡಿರುವುದು ದೇಶದಾದ್ಯಂತ ಜನರಿಂದ ಪ್ರಶಂಸೆಗೆ ಪಾತ್ರವಾಗಿದೆ. ಹಾಗೂ ಸಾರ್ವಜನಿಕರಿಂದ ಸ್ವಾಗತಿಸಿ ಹೆಮ್ಮೆ ಪಡುತ್ತಿದ್ದಾರೆ. ಭಾರತದ ನಿರ್ಮಾಣ ಮತ್ತು ಇಂಜಿನಿಯರಿಂಗ್ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ ವ್ಯಕ್ತಿಗೆ ಇದು ಸೂಕ್ತ ಗೌರವವೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆ, ದೆಹಲಿ ಮೆಟ್ರೋದಲ್ಲಿ ಸರ್ ಎಂ. ವಿಶ್ವೇಶ್ವರಯ್ಯರ ಹೆಸರಿನ ನಿಲ್ದಾಣ ಆರಂಭವಾಗಿರುವುದು ಕನ್ನಡಿಗರಾದ ನಮ್ಮೆಲ್ಲರಿಗೂ ಹಾಗು ಕರ್ನಾಟಕದ ಜನತೆಗೆ ಸಂದ ಗೌರವವೆಂದು ಪರಿಗಣಿಸಲಾಗಿದೆ.

ಭಾರತದ ಇಂಜಿನಿಯರಿಂಗ್ ಪರಂಪರೆಗೆ ಸಲ್ಲಿಸಿದ ಗೌರವವಾಗಿದ್ದು, ಯುವ ಇಂಜಿನಿಯರ್‌ಗಳಿಗೆ ಪ್ರೇರಣೆಯ ಸಂಕೇತವಾಗಿದ್ದು, ನಮ್ಮೆಲ್ಲರ ಹೃದಯಸ್ಪರ್ಶಿ ಘಟನೆಯಾಗಿದೆ.

# ಹೋರ್ಮುಜ್ ಸಮುದ್ರ ಮಾರ್ಗ ಉದ್ವಿಗ್ನತೆ ಜಾಗತಿಕ ತೈಲ ಸರಬರಾಜಿಗೆ ಸವಾಲು

**ಮ**ಧ್ಯಪ್ರಾಚ್ಯದ ತಂತ್ರಜ್ಞಾನದ ಹೃದಯವೆಂದೇ ಕರೆಯಲ್ಪಡುವ Strait of Hormud ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವುದು ಜಾಗತಿಕ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆಯನ್ನು ಉಂಟು ಮಾಡಿದೆ. ಈ ಸಮುದ್ರ ಮಾರ್ಗವು ಪರ್ಷಿಯನ್ ಗಡಿ ಮತ್ತು ಅರೇಬಿಯನ್ ಸಮುದ್ರವನ್ನು ಸಂಪರ್ಕಿಸುವ ಪ್ರಮುಖ ದಾರಿಯಾಗಿದ್ದು, ಜಗತ್ತಿನ ತೈಲ ಸಾಗಣೆಯಲ್ಲಿಯೂ ಮಹತ್ವದ ಪಾತ್ರವಹಿಸಿದೆ.



ಈ ಸಮುದ್ರಮಾರ್ಗದ ಉತ್ತರ ಭಾಗದಲ್ಲಿ ಇರಾನ್ ಮತ್ತು ದಕ್ಷಿಣ ಭಾಗದಲ್ಲಿ ಓಮಾನ್ ದೇಶವಿದ್ದು, ಈ ಪ್ರದೇಶವು ತಂತ್ರಜ್ಞಾನದ ದೃಷ್ಟಿಯಿಂದ ಅತಿ ಸಂವೇದನಾಶೀಲವಾಗಿದೆ. ದಿನನಿತ್ಯ ಲಕ್ಷಾಂತರ ಬ್ಯಾರೆಲ್ ತೈಲ ಸಾಗಣೆ ಈ ಮಾರ್ಗದ ಮೂಲಕ ನಡೆಯುತ್ತಿದ್ದು, ವಿಶ್ವದ ಸುಮಾರು 20 ಶೇಕಡಾ ತೈಲ ಸರಬರಾಜು ಇದರಿಂದಲೇ ಸಾಗುತ್ತದೆ ಎಂಬ ಅಂದಾಜು ಇದೆ.

ಇತ್ತೀಚಿನ ಬೆಳವಣಿಗೆಗಳಲ್ಲಿ, ಇರಾನ್ ತನ್ನ ಸೈನಿಕ ಹಾಜರಾತಿಯನ್ನು ಹೆಚ್ಚಿಸಿರುವುದು ಹಾಗೂ ಹಡಗು ಸಂಚಾರಕ್ಕೆ ಅಡ್ಡಿಪಡಿಸುವ ಪ್ರಯತ್ನಗಳು ನಡೆದಿರುವುದಾಗಿ ವರದಿಗಳು ತಿಳಿಸಿವೆ. ಇದರಿಂದ ಹೋರ್ಮುಜ್ ಮಾರ್ಗದಲ್ಲಿ ಹಡಗುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿ, ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಗೆ ಕಾರಣವಾಗಿರಬಹುದಾಗಿದೆ ಎಂದು ಜಾಗತಿಕ ರಾಜಕೀಯ ವಿಶ್ಲೇಷಕಾರರು ಅಭಿಪ್ರಾಯ ಪಡುತ್ತಿದ್ದಾರೆ.

ಅಮೆರಿಕಾ ಸೇರಿದಂತೆ ಹಲವು ಪಾಶ್ಚಾತ್ಯ ರಾಷ್ಟ್ರಗಳು ಈ ಮಾರ್ಗದ ಸುರಕ್ಷತೆಗಾಗಿ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಹೋರ್ಮುಜ್ ಸಮುದ್ರಕಂಠಮಾರ್ಗವನ್ನು ಮುಕ್ತವಾಗಿಡುವ ಪ್ರಯತ್ನಗಳು ನಡೆಯುತ್ತಿವೆ. ಆದರೆ ಈ ಪ್ರದೇಶದ ರಾಜಕೀಯ ಉದ್ವಿಗ್ನತೆ ಇನ್ನಷ್ಟು ಹೆಚ್ಚಾದರೆ, ಜಾಗತಿಕ ವ್ಯಾಪಾರ ಮತ್ತು ಇಂಧನ ಸರಬರಾಜಿಗೆ ದೊಡ್ಡ ಹೊಡೆತ ಬೀಳುವ ಆತಂಕ ವ್ಯಕ್ತವಾಗಿದೆ.

ಭಾರತದ ದೃಷ್ಟಿಯಿಂದ ಈ ಬೆಳವಣಿಗೆಗಳು ಅತ್ಯಂತ ಮಹತ್ವದ್ದಾಗಿವೆ. ಭಾರತ ತನ್ನ ತೈಲ ಅವಶ್ಯಕತೆಗಳ ಬಹುಪಾಲು ಮಧ್ಯಪ್ರಾಚ್ಯ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಹೋರ್ಮುಜ್ ಮಾರ್ಗದಲ್ಲಿ ವ್ಯತ್ಯಯ ಉಂಟಾದರೆ, ದೇಶದ ಇಂಧನ ದರಗಳಲ್ಲಿ ಏರಿಕೆ ಹಾಗೂ ಆರ್ಥಿಕ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ.

ಒಟ್ಟಿನಲ್ಲಿ, ಹೋರ್ಮುಜ್ ಸಮುದ್ರಕಂಠ ಮಾರ್ಗದಲ್ಲಿ ಉಂಟಾಗಿರುವ ಉದ್ವಿಗ್ನತೆ ಕೇವಲ ಪ್ರಾದೇಶಿಕ ಸಮಸ್ಯೆಯಲ್ಲ, ಅದು ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ಪ್ರಮುಖ ಬೆಳವಣಿಗೆಯಾಗಿದೆ. ಈ ಪರಿಸ್ಥಿತಿಯನ್ನು ಸಮತೋಲನಗೊಳಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯ ಮತ್ತು ರಾಜತಾಂತ್ರಿಕ ಪ್ರಯತ್ನಗಳು ನಡೆಯುವುದು ಅಗತ್ಯವಾಗಿವೆ.

# ಬೋಗನ್ ವಿಲಾ.. ಅತ್ಯಂತ ಸುಂದರ ಅಲಂಕಾರಿಕ ಗಿಡ



**ಭಾ**ರತದಲ್ಲಿ ಸಾಮಾನ್ಯವಾಗಿ ಬೋಗನ್ ವಿಲಿಂಯಾ/ಬೋಗನ್‌ವಿಲ್ಲಾ ಎಂದು ಕರೆಯುತ್ತಾರೆ. ಮನೆ ತೋಟಗಳು, ರಸ್ತೆ ಬದಿಗಳು ಹಾಗೂ ಗೋಡೆಗಳ ಅಲಂಕಾರಕ್ಕೆ ಬಳಸುವ ಅತ್ಯಂತ ಸುಂದರ ಹೂಗಿಡಗಳಲ್ಲಿ ಒಂದು. ಈ ಗಿಡವು ಗುಲಾಬಿ, ನೇರಳೆ, ಕೆಂಪು, ಕಿತ್ತಳೆ, ಬಿಳಿ ಮತ್ತು ಹಳದಿ ಬಣ್ಣಗಳಲ್ಲಿ ಕಾಣಿಸುತ್ತದೆ. ನಾವು ಹೂವೆಂದು ಕಾಣುವ ಬಣ್ಣದ ಭಾಗಗಳು ವಾಸ್ತವದಲ್ಲಿ ಬ್ರಾಕ್ಟ್‌ಗಳು (ವಾರ್ಪಡಿಸಿದ ಎಲೆಗಳು) ಆಗಿವೆ. ಬೋಗನ್‌ವಿಲಿಯಾ ಗಿಡದ ನಿಜವಾದ ಹೂವು ಸಣ್ಣದಾಗಿದ್ದು ಬಿಳಿ ಬಣ್ಣದಾಗಿರುತ್ತದೆ. ಅದರ ಸುತ್ತಲಿರುವ ಬಣ್ಣದ ಎಲೆಗಳೇ ಗಿಡಕ್ಕೆ ಆಕರ್ಷಕ ಸೌಂದರ್ಯ ನೀಡುತ್ತವೆ.

ಬಣ್ಣಗಳ ಹಬ್ಬ ಹರಡುವ ಬೋಗನ್ ವಿಲಿಯಾ ನಗರಗಳ ರಸ್ತೆ ಬದಿಗಳಲ್ಲಾಗಲಿ, ಮನೆಗಳ ಕಾಂಪೌಂಡ್ ಗೋಡೆಗಳ ಮೇಲಾಗಲಿ ಕಂಗೊಳಿಸುವ ಬಣ್ಣಗಳಿಂದ ಮನಸೆಳೆಯುವ ಒಂದು ಅಲಂಕಾರಿಕ ಗಿಡವೆಂದರೆ Bougainvillea. ಸಾಮಾನ್ಯವಾಗಿ "ಬೋಗನ್ ವಿಲಿಯಾ" ಅಥವಾ "ಬೋಗನ್ ವಿಲ್ಲಾ" ಎಂದು ಕರೆಯಲಾಗುವ ಈ ಗಿಡವು ತನ್ನ ಬಣ್ಣಬಣ್ಣದ ಹೂಗಳ ಮೂಲಕ ಎಲ್ಲರ ಗಮನ ಸೆಳೆಯುತ್ತದೆ. ಮನೆ ತೋಟಗಳು, ಉದ್ಯಾನವನಗಳು ಮತ್ತು ಸಾರ್ವಜನಿಕ ಸ್ಥಳಗಳ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಈ ಗಿಡದ ಪಾತ್ರ ವಿಶೇಷವಾಗಿದೆ.

ಬೋಗನ್‌ವಿಲಿಯಾ ಗಿಡದ ವಿಶೇಷತೆ ಅದರ ಕಂಗೊಳಿಸುವ ಬಣ್ಣಗಳಲ್ಲಿ ಇದೆ. ಗುಲಾಬಿ, ನೇರಳೆ, ಕೆಂಪು, ಕಿತ್ತಳೆ, ಬಿಳಿ ಹಾಗೂ ಹಳದಿ ಬಣ್ಣಗಳಲ್ಲಿ ಈ ಗಿಡದ ಹೂಗಳು ಕಾಣಿಸಿಕೊಳ್ಳುತ್ತವೆ. ಆದರೆ ಬಹುತೇಕರಿಗೆ ತಿಳಿಯದ ವಿಷಯವೆಂದರೆ ನಾವು ಹೂವೆಂದು ಭಾವಿಸುವ ಬಣ್ಣದ ಭಾಗಗಳು ನಿಜವಾದ ಹೂಗಳು ಅಲ್ಲ. ಅವು "ಬ್ರಾಕ್ಟ್‌ಗಳು" ಎನ್ನುವ ಬಣ್ಣದ ಎಲೆಗಳು. ಅದರ ಮಧ್ಯದಲ್ಲಿರುವ ಸಣ್ಣ ಬಿಳಿ ಹೂವೇ ನಿಜವಾದ ಹೂವಾಗಿದೆ. ಇನ್ನೊಂದು ವಿಶೇಷತೆ ಎಂದರೆ ಬೋಗನ್‌ವಿಲಿಂಯಾ ಗಿಡವು ಏರುಗಿಡವಾಗಿರುವುದು. ಗೋಡೆಗಳು, ಗೇಟ್‌ಗಳು, ಆರ್ಚ್‌ಗಳು ಮತ್ತು ಪರ್ಗೋಲಾ ಮೇಲೆ ಏರಿ ಬೆಳೆದು ಮನೆಗಳ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಕೆಲವು ಕಡೆ ಇದನ್ನು ಬೇಲಿ ಗಿಡವಾಗಿ ಅಥವಾ ಸಣ್ಣ ಮರದ ರೂಪದಲ್ಲಿಯೂ ಬೆಳೆಸಲಾಗುತ್ತದೆ.

ನಗರೀಕರಣ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಹಸಿರಿನ ಪ್ರಮಾಣ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಬೋಗನ್‌ವಿಲಿಯಾ ತರಹದ ಅಲಂಕಾರಿಕ ಗಿಡಗಳು ನಗರಗಳಿಗೆ ಹೊಸ ಜೀವ ತುಂಬುತ್ತಿವೆ. ಕಡಿಮೆ ನಿರ್ವಹಣೆ ಬೇಕಾದರೂ ಹೆಚ್ಚಿನ ಸೌಂದರ್ಯ ನೀಡುವ ಈ ಗಿಡವು ಪರಿಸರದ ಅಂದವನ್ನು ಹೆಚ್ಚಿಸುವ ಜೊತೆಗೆ ಜನರಲ್ಲಿ ಪ್ರಕೃತಿಯ ಮೆಚ್ಚುಗೆಯನ್ನೂ ಹೆಚ್ಚಿಸುತ್ತದೆ. ಹೀಗಾಗಿ, ಬಣ್ಣಗಳ ಹಬ್ಬವನ್ನೇ ಸೃಷ್ಟಿಸುವ ಬೋಗನ್‌ವಿಲಿಯಾ ಗಿಡವು ಕೇವಲ ಒಂದು ಅಲಂಕಾರಿಕ ಗಿಡವಲ್ಲ; ಅದು ನಮ್ಮ ಪರಿಸರವನ್ನು ಸುಂದರಗೊಳಿಸುವ ಪ್ರಕೃತಿಯ ಒಂದು ಅದ್ಭುತ ಕೊಡುಗೆ ಎನ್ನಬಹುದು. ಈ ಗಿಡಗಳ ನಿರ್ವಹಣೆ ತುಂಬಾ ಸುಲಭ....ಈ ಗಿಡಗಳಿಗೆ ರೋಗ ಬಾಧೆ ಕಡಿಮೆ....ನೀರು ಸಹಾ ಹೆಚ್ಚಾಗಿ ಬೇಕಾಗುವುದಿಲ್ಲ. ಈ ಗಿಡಗಳಿಗೆ ಯಾವುದೇ ಗೊಬ್ಬರದ ಅವಶ್ಯಕತೆ ಹೆಚ್ಚಾಗಿ ಬೇಕಾಗುವುದಿಲ್ಲ.

ಈ ಗಿಡವನ್ನು ನಾವುಗಳು ಗಿಡದ ಹದವಾಗಿ ಬೆಳೆದ ಅಥವಾ ಬಲಿತ ಕಡ್ಡಿಗಳನ್ನು (ಕಟಿಂಗ್) ಸಂಗ್ರಹಿಸಿ ಬರೀ ಮಣ್ಣು (ಬರೀ ಮಣ್ಣಾದರೆ ಸ್ವಲ್ಪ ಅರಿಶಿನ ಸೇರಿಸಿಕೊಳ್ಳಬೇಕು) ಅಥವಾ ಮರಳು ಮಿಶ್ರಿತ ಮಣ್ಣು ಸಣ್ಣ ಸಣ್ಣ ತೊಟ್ಟಿಗಳಲ್ಲಿ ಸಿದ್ಧಮಾಡಿಟ್ಟುಕೊಂಡು ನಂತರ ಸಂಗ್ರಹಿಸಿ ತಂದ ಕಡ್ಡಿಗಳನ್ನು ಮರು ಹೊಸತಾಗಿ ಕಡ್ಡಿಯ ಗಂಟಿನ ಕೆಳಭಾಗದಲ್ಲಿ ನಯವಾಗಿ ಕತ್ತರಿಸಿ ಅದರಲ್ಲಿ ಎಲೆಗಳು ಇದ್ದರೆ ಅದನ್ನೆಲ್ಲಾ ತೆಗೆದು ತೊಟ್ಟಿಗೆ ಹಾಕಿ ನಂತರ ಅದರ ಬುಡ ಗಟ್ಟಿ ಮಾಡಬೇಕು...

ಏಕೆಂದರೆ ಅದರ ಬುಡ ನುಸುಳಿದ್ದರೆ ಕಡ್ಡಿ ಕೊಳೆತು ಕಪ್ಪಾಗಿ ಸಾಯುತ್ತದೆ...ಗಟ್ಟಿ ಮಾಡಿ ನಂತರ ಬೇಕಾದಷ್ಟೇ ನೀರು ಹಾಕಿ ಬೇರೆ ಗಿಡಗಳ ಬುಡದಲ್ಲಿ ಅಥವಾ ಹದವಾದ ನೆರಳಿನಲ್ಲಿ ಇಡಬೇಕು...ತೊಟ್ಟಿಯಲ್ಲಿ ತೇವಾಂಶ ಇದ್ದರೆ ನೀರು ಹಾಕಬಾರದು... ನೋಡಿಕೊಂಡು ಎರಡು ಮೂರು ದಿನಕ್ಕೆ ಒಮ್ಮೆ ಚೂರು ಹಾಕಿದರೆ ಸಾಕು...ನಂತರ ಒಂದು ವಾರದೊಳಗೆ ಸಣ್ಣ ಸಣ್ಣ ಎಲೆಗಳು ಅದರ ಗಂಟಿನ ಭಾಗದಲ್ಲಿ ಏಳಲು ಪ್ರಾರಂಭ ಆಗುತ್ತದೆ. ಮೊದಲಿಗೆ ತಿಳಿ ಹಸಿರಾಗಿ ಎಳತು ಎಲೆ ಬಂದು ಕಂಡು ಹಸಿರು ಬಂದರೆ ಮಾತ್ರ ಸರಿಯಾಗಿ ಜೀವ ಹಿಡಿದಿದೆ ಎಂದು ಲೆಕ್ಕ...ನಂತರ ನಾವು ಅದನ್ನು ಸೂಕ್ತ ಜಾಗದಲ್ಲಿ ತುಂಬಾ ಬಿಸಿಲು ಬೀಳುವ ಜಾಗದಲ್ಲಿ ನೆಡಬಹುದು...ಅಥವಾ ಪಾಟ್‌ಗಳಲ್ಲಿ ಸಹಾ ಹಾಕಬಹುದು..

ಚಟ್ಟಿ (ಕುಂಡ)ಯಲ್ಲಿ ನೆಟ್ಟರೆ ಆಗಾಗ ಅದರ ಗೆಲ್ಲುಗಳನ್ನು ಕತ್ತರಿಸಿ ಬೇಕಾದ ಆಕಾರ ಕೊಟ್ಟರೆ ಅಲ್ಲಿಗೆ ಹೂವಾಗಿ ನೋಡಲು ತುಂಬಾ ಚೆಂದ... ಅಥವಾ ಬೇರೆ ಮರಗಳ ಬುಡದಲ್ಲಿ ನೆಟ್ಟರೆ ಮರಕ್ಕೆ ಹೊಂದಿಕೊಂಡು ಬಾನೆತ್ತರಕ್ಕೆ ಚಾಚಿ ಬೆಳೆದು ಹೂ ಆಗಿ ಚೆಂದ ಕಾಣುತ್ತದೆ ಸಹಾ....ಬೇಕಾದರೆ ನೆಲಗಡಲೆ ಹಿಂಡಿಯ ಹುಳಿ ಬರಿಸಿ ತುಂಬಾ ಡೈಲ್ಯೂಟ್ ಮಾಡಿ ಹಾಕಿದರೂ ಸಹಾ ಗಿಡ ಚೆನ್ನಾಗಿ ಆಗುತ್ತದೆ. ಅಥವಾ ಸುಲಭವಾಗಿ ನಮ್ಮಲ್ಲೇ ಇರುವ ಪಪ್ಪಾಯಿ ಗಿಡದ ಎಲೆಗಳನ್ನು ಜಜ್ಜಿ ಅಥವಾ ಸಣ್ಣಕ್ಕೆ ಕತ್ತರಿಸಿ ಮಿಕ್ಸಿಗೆ ಹಾಕಿ ಅದರೊಟ್ಟಿಗೆ ಸ್ವಲ್ಪ ಬೆಳ್ಳುಳ್ಳಿಯನ್ನು ಸೇರಿಸಿ ಮಿಶ್ರಣ ತಯಾರಿಸಿ ಅದನ್ನು ಸೋಸಿಕೊಂಡು ಅದರ ನೀರನ್ನು ತೆಳ್ಳ ಮಾಡಿ ಗಿಡಗಳಿಗೆ ಹಾಕಿದರೂ ಸಹಾ ಗಿಡದ ತುಂಬಾ ಹೂ ಆಗಿ ನೋಡಲು ಬಾರೀ ಚಂದ. ಅಥವಾ ಹುಳಿ ಮಜ್ಜಿಗೆ ಇದ್ದರೆ ಅದಕ್ಕೆ ಅಕ್ಕಿ ತೊಳೆದ ನೀರನ್ನು ಹಾಕಿಟ್ಟು ಎರಡು ಅಥವಾ ಮೂರು ದಿನ ಇರಿಸಿ ಬರೀ ಹುಳಿ ಬಂದು ನಂತರ ಅದನ್ನು ತುಂಬಾ ನೀರಿನೊಂದಿಗೆ ಸೇರಿಸಿ ಗಿಡದ ಗಾತ್ರ ಕ್ಕೆ ತಕ್ಕ ಬೇಕಾದ ಪ್ರಮಾಣದಲ್ಲಿ ಹಾಕಬೇಕು.... ಈ ಒಂದು ಗೊಬ್ಬರ ಯಾವುದೇ ರೀತಿಯ ಗಿಡಗಳಿಗೂ ತುಂಬಾ ಒಳ್ಳೆಯ ಗೊಬ್ಬರ......

ಮಳೆಗಾಲದ ಪ್ರಾರಂಭದಲ್ಲಿ ಗಿಡಗಳನ್ನು ಬುಡವ ಸ್ವಲ್ಪ ಉಳಿಸಿ ಕತ್ತರಿಸಿ ಬಿಡಬೇಕು...ಮತ್ತೆ ಹೂ ಆಗುವ ಸಮಯಕ್ಕೆ ಸರಿಯಾಗಿ ಗಿಡ ಚೆನ್ನಾಗಿ ಚಿಗುರೊಡೆದು ಬರುತ್ತದೆ...ಆಗ ಬೇಕಾದ ಆಕಾರ ಕೊಟ್ಟರೆ ಹೂ ಬಿಡಲು ಸಿದ್ಧವಾಗುತ್ತದೆ.

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ: ರಾಜ್ಯ 279 ಅನಧಿಕೃತ ಲೇಔಟ್‌ಗಳ ಪಟ್ಟಿ ಪ್ರಕಟಿಸಿದ BDA




**ಬೆಂ**ಗಳೂರು: ರಾಜಧಾನಿ ಬೆಂಗಳೂರು ನಗರದಲ್ಲಿ 279 ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಅಥವಾ ಮನೆ ಖರೀದಿಸದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (Bengaluru Development Authority) ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ಸಾರ್ವಜನಿಕರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ತನ್ನ ವೆಬ್‌ಸೈಟ್‌ನಲ್ಲಿ ಅನಧಿಕೃತ ಬಡಾವಣೆಗಳ ಸಂಪೂರ್ಣ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಅಕ್ರಮ ಲೇಔಟ್‌ಗಳೆಂದರೆ ಮೂರು ಹಂತಗಳನ್ನು ಅನುಸರಿಸದೆ ವಸತಿ ಭೂಮಿಯಾಗಿ ಪರಿವರ್ತಿಸಲಾದ ಕೃಷಿ ಭೂಮಿಯನ್ನು ಉಲ್ಲೇಖಿಸುತ್ತವೆ: ಭೂ ಬಳಕೆ ಬದಲಾವಣೆಗೆ ಬಿಡಿಎಯಿಂದ ಪರಿವರ್ತನೆಗೆ ಅಗತ್ಯವಾದ ಅನುಮತಿಯನ್ನು ತೆಗೆದುಕೊಳ್ಳುವುದು, ಪರಿವರ್ತನೆಗೆ ಜಿಲ್ಲಾಧಿಕಾರಿಗಳ ಒಪ್ಪಿಗೆ ಮತ್ತು ಲೇಔಟ್ ರಚನೆಗೆ ಬಿಡಿಎ ಅನುಮೋದನೆಯಾಗಿರುತ್ತದೆ ಎಂದು ಬಿಡಿಎ ನಗರ ಯೋಜನಾ ಸದಸ್ಯ ಎಲ್.ಶಶಿಕುಮಾರ್ ಹೇಳುತ್ತಾರೆ.

ಯಾವುದೇ ಲೇಔಟ್‌ನಲ್ಲಿ ನಿವೇಶನ ಅಥವಾ ಮನೆಗಳನ್ನು ಖರೀದಿಸಲು ಹೆಚ್ಚು ಹಣವನ್ನು ಹೂಡಿಕೆ ಮಾಡುವ ಸಾರ್ವಜನಿಕರು ಈ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕು. ತಮ್ಮ ಆಸ್ತಿ ಕಾನೂನುಬದ್ಧವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಪರೀಕ್ಷೆ ಮಾಡುವ ನಾವು ಸಾರ್ವಜನಿಕರನ್ನು ಪದೇ ಪದೇ ಒತ್ತಾಯಿಸುತ್ತೇವೆ. ಈ ಅಕ್ರಮ ಬಡಾವಣೆಗಳಲ್ಲಿ ಹೆಚ್ಚಿನವು ರಸ್ತೆಗಳು, ಚರಂಡಿಗಳು, ಸೈಟ್ ಸಂಖ್ಯೆಗಳು ಮತ್ತು ಇತರ ಮೂಲಸೌಕರ್ಯಗಳನ್ನು ಹೊಂದಿರುವ ಖಾಲಿ ನಿವೇಶನಗಳಾಗಿವೆ. ಅವುಗಳಲ್ಲಿ ಕೆಲವು ಮನೆಗಳನ್ನು ನಿರ್ಮಿಸಿವೆ ಎಂದು ಶಶಿಕುಮಾರ್ ಹೇಳುತ್ತಾರೆ.

279 ಅನಧಿಕೃತ ಬಡಾವಣೆಗಳಲ್ಲಿ 52 ಬಿದರಹಳ್ಳಿ ಹೋಬಳಿ, 16 ಯಲಹಂಕ ಹೋಬಳಿ, 29 ಜಾಲ ಹೋಬಳಿ, 41 ಕೆಂಗೇರಿ, 4 ಉತ್ತರಹಳ್ಳಿ, 53 ಜಿಗಣಿ, 14 ಬೇಗೂರಿನಲ್ಲಿ 5, ಇತರ 5 ಬಡಾವಣೆಗಳಲ್ಲಿ 5, ಈ ಮುಂಚೆ 2014ರಲ್ಲಿ 52 ಹಾಗೆಯೇ ಮುಂದುವರೆದಿವೆ. ಅದರಲ್ಲೂ ಯಲಹಂಕ ಹೋಬಳಿಯಲ್ಲಿ 52. ಕೆಆರ್ ಪುರಂ, ಸರ್ಜಾಪುರದಲ್ಲಿ 29 ಮತ್ತು ವರ್ತೂರಿನಲ್ಲಿ 8 ಹಾಗೆಯೇ ಮುಂದುವರೆದಿವೆ.

ಈ ಬಗ್ಗೆ ಪರಿಶೀಲಿಸಲಾಗಿ ಸರ್ಕಾರದ ನಿರ್ದೇಶನದಂತೆ ಬಿಬಿಎಂಪಿ ಮತ್ತು ಬಿಡಿಎ ವ್ಯಾಪ್ತಿಯಲ್ಲ ಪಂಚಾಯತ್ ಇಲಾಖೆ ಸದಸ್ಯರು ಹಾಗೂ ಇಂಜಿನಿಯರ್ ಸದಸ್ಯರ ವಿಭಾಗದ ಎಂಜಿನಿಯರ್‌ಗಳನ್ನು ಒಳಗೊಂಡ ವಿಶೇಷ ತಂಡವನ್ನು ರಚಿಸಲಾಗಿದೆ ಎಂದರು.

ಅನೇಕ ಸಾರ್ವಜನಿಕರು ಪಂಚಾಯಿತಿಯಿಂದ ಅನುಮೋದನೆ ನೀಡಲು ಅಧಿಕಾರ ಹೊಂದಿಲ್ಲದಿದ್ದರೂ ಅನುಮೋದನೆ ಪಡೆದು ಒಪ್ಪಿಗೆ ನೀಡುತ್ತಾರೆ. ಅಕ್ರಮವಲ್ಲದ ಲೇಔಟ್‌ಗಳಿಗೆ ನೀರು, ವಿದ್ಯುತ್ ನೀಡದಿದ್ದರೆ ಈ ಅಕ್ರಮ ಬಡಾವಣೆಗಳ ನಿಯಂತ್ರಣ ಸುಲಭವಾಗುತ್ತದೆ. ಅಕ್ರಮ ಬಡಾವಣೆಗಳು ಅಥವಾ ಕಟ್ಟಡಗಳು ಪತ್ತೆಯಾದಾಗ ಸರ್ಕಾರವು ಅಂತಹ ಕಟ್ಟಡಗಳನ್ನು ಕೆಡವಲಾಗುತ್ತದೆ ಎಂದು ತಿಳಿದಿದ್ದರೂ ಸಾರ್ವಜನಿಕರು ವಸತಿ ಕಟ್ಟಡ ನಿರ್ಮಿಸುತ್ತಿದ್ದರೆ ಸರ್ಕಾರ ಕಾನೂನಿನ ಪ್ರಕಾರ ಕ್ರಮ ಜರುಗಿಸಲಾಗುತ್ತದೆ.

# ಭಾರತ ಟೆಲ್ ಅವೀವ್ ಭೇಟಿ: ಭಾರತ-ಇಸ್ರೇಲ್ ಬಾಂಧವ್ಯಕ್ಕೆ ಹೊಸ ಅಧ್ಯಾಯ

**ಟೆ**ಲ್ ಅವೀವ್, ಫೆಬ್ರವರಿ: ಭಾರತದ ಪ್ರಧಾನಮಂತ್ರಿ Narendra Modi ಅವರು ಫೆಬ್ರವರಿ 2026ರಲ್ಲಿ ಇಸ್ರೇಲ್‌ಗೆ ಎರಡು ದಿನಗಳ ಮಹತ್ವದ ರಾಜ್ಯ ಭೇಟಿ ನೀಡಿದ್ದು, ಭಾರತ-ಇಸ್ರೇಲ್ ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ದಿಕ್ಕು ನೀಡಿದೆ. ಇಸ್ರೇಲ್ ಪ್ರಧಾನಮಂತ್ರಿ Benjamin Netanyahu ಅವರ ಆಹ್ವಾನದ ಮೇರೆಗೆ ನಡೆದ ಈ ಭೇಟಿ ರಾಜತಾಂತ್ರಿಕವಾಗಿ ವಿಶೇಷ ಮಹತ್ವ ಪಡೆದುಕೊಂಡಿದೆ.

ಪ್ರಧಾನಿ ಮೋದಿ ಅವರು ಫೆಬ್ರವರಿ 25ರಂದು Tel Aviv ತಲುಪಿದಾಗ, ಅವರನ್ನು ಸ್ವತಃ ನೆತನ್ಯಾಹು ಸ್ವಾಗತಿಸಿದರು. ಈ ಸಂದರ್ಭ ಉಭಯ ದೇಶಗಳ ನಾಯಕರು ಪರಸ್ಪರ ಸ್ನೇಹ ಹಾಗೂ ಸಹಕಾರದ ಬದ್ಧತೆಯನ್ನು ಪುನರುಚ್ಚರಿಸಿದರು.

ಭೇಟಿಯ ಪ್ರಮುಖ ಆಕರ್ಷಣೆಯಾಗಿ, ಪ್ರಧಾನಿ ಮೋದಿ ಅವರು ಇಸ್ರೇಲ್ ಸಂಸತ್ತಾದ Knesset ನಲ್ಲಿ ಭಾಷಣ ಮಾಡಿದರು. ಇದು ಭಾರತೀಯ ಪ್ರಧಾನಮಂತ್ರಿ ನೀಡಿದ ಮೊದಲ ಭಾಷಣವಾಗಿದ್ದು, ಇತಿಹಾಸದಲ್ಲೇ ವಿಶಿಷ್ಟ ಕ್ಷಣವಾಗಿ ದಾಖಲಾಗಿದೆ. ತಮ್ಮ ಭಾಷಣದಲ್ಲಿ ಅವರು ಪ್ರಜಾಸತ್ತಾತ್ಮಕ ಮೌಲ್ಯಗಳು, ನವೀನ ತಂತ್ರಜ್ಞಾನ ಹಾಗೂ ಭದ್ರತಾ ಸಹಕಾರದ ಮಹತ್ವವನ್ನು ಒತ್ತಿಹೇಳಿದರು.

ಇದೇ ವೇಳೆ ಉಭಯ ದೇಶಗಳ ನಡುವೆ ರಕ್ಷಣಾ, ಕೃಷಿ, ತಂತ್ರಜ್ಞಾನ ಹಾಗೂ ಕಾರ್ಮಿಕ ವಿನಿಮಯ ಕ್ಷೇತ್ರಗಳಲ್ಲಿ ಹಲವು ಒಪ್ಪಂದಗಳು ಸಹಿ ಮಾಡಲಾಯಿತು. ವಿಶೇಷವಾಗಿ, ರಕ್ಷಣಾ ತಂತ್ರಜ್ಞಾನ ಹಾಗೂ ಸೈಬರ್ ಭದ್ರತಾ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಗಟ್ಟಿ ಮಾಡುವ ಬಗ್ಗೆ ಚರ್ಚೆಗಳು ನಡೆದವು.

ಭೇಟಿಯ ಇನ್ನೊಂದು ವಿಶೇಷ ಅಂಶವಾಗಿ, ಪ್ರಧಾನಿ ಮೋದಿ ಅವರಿಗೆ ಇಸ್ರೇಲ್‌ನ ಅತ್ಯುನ್ನತ ಗೌರವಗಳಲ್ಲಿ ಒಂದಾದ "Knesset Medal" ಪ್ರದಾನ ಮಾಡಲಾಯಿತು. ಈ ಗೌರವ ಸ್ವೀಕರಿಸಿದ ಮೊದಲ ವಿದೇಶಿ ನಾಯಕ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.



ಈ ಭೇಟಿ ಮಧ್ಯಪ್ರಾಚ್ಯದ ರಾಜಕೀಯ ಪರಿಸ್ಥಿತಿಯ ನಡುವೆ ನಡೆದಿರುವುದರಿಂದ, ಜಾಗತಿಕ ಮಟ್ಟದಲ್ಲಿಯೂ ಗಮನ ಸೆಳೆದಿದೆ. ಭಾರತವು ಇಸ್ರೇಲ್ ಜೊತೆಗಿನ ಸ್ನೇಹವನ್ನು ಗಟ್ಟಿಗೊಳಿಸುವ ಜೊತೆಗೆ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಯ ಮೇಲೂ ಒತ್ತು ನೀಡಿದೆ.

ಒಟ್ಟಾರೆ, ಪ್ರಧಾನಿ ಮೋದಿ ಅವರ ಟೆಲ್ ಅವೀವ್ ಭೇಟಿ ಭಾರತ-ಇಸ್ರೇಲ್ ಸಂಬಂಧಗಳಲ್ಲಿ ಹೊಸ ಅಧ್ಯಾಯ ಆರಂಭಿಸಿದ ಮಹತ್ವದ ಹೆಜ್ಜೆಯಾಗಿದೆ. ಇದು ಭವಿಷ್ಯದಲ್ಲಿ ಉಭಯ ದೇಶಗಳ ನಡುವೆ ಇನ್ನಷ್ಟು ಬಲಿಷ್ಠ ಸಹಕಾರಕ್ಕೆ ದಾರಿ ಮಾಡಿಕೊಡುವುದಾಗಿ ನಿರೀಕ್ಷಿಸಲಾಗಿದೆ.

# 16 ಸಾವಿರ ಕೋಟಿಗೂ ಅಧಿಕ ಮೊತ್ತಕ್ಕೆ ಆರ್‌ಸಿಬಿ ಬಿಕರಿಯಾಗುವ ನಿರೀಕ್ಷೆ




**ಬೆಂ**ಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್‌ನ ಅತ್ಯಂತ ಜನಪ್ರಿಯ ತಂಡಗಳಲ್ಲಿ ಒಂದಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಾಲೀಕತ್ವ ಬದಲಾವಣೆಗೆ ಕ್ಷಣಗಣನೆ ಆರಂಭವಾಗಿದೆ. ಐಪಿಎಲ್ 19ನೇ ಆವೃತ್ತಿ ಆರಂಭಕ್ಕೆ ಕೇವಲ ಹತ್ತು ದಿನಗಳ ಬಾಕಿ ಇರುವಾಗ ಈ ಬೆಳವಣಿಗೆ ತ್ವರಿತವಾಗಿ ನಡೆದಿದೆ. ಸದ್ಯ ಲಭ್ಯವಿರುವ ಮಾಹಿತಿಯ ಪ್ರಕಾರ, ಆರ್‌ಸಿಬಿ ತಂಡವು ಸುಮಾರು 2 ಶತಕೋಟಿ ಡಾಲರ್ ಅಂದರೆ ಭಾರತೀಯ ರೂಪಾಯಿ ಮೌಲ್ಯದಲ್ಲಿ ಅಂದಾಜು 16 ಸಾವಿರ ಕೋಟಿಗೂ ಅಧಿಕ ಮೊತ್ತಕ್ಕೆ ಮಾರಾಟವಾಗುವ ಸಾಧ್ಯತೆ ಇದೆ.

ಆರ್‌ಸಿಬಿ ತಂಡದ ಪ್ರಸ್ತುತ ಮಾಲೀಕರಾದ ಡಿಯಾಜಿಯೊ ಸಂಸ್ಥೆಯು ಕಳೆದ ವರ್ಷವೇ ತಂಡವನ್ನು ಮಾರಾಟ ಮಾಡುವ ನಿರ್ಧಾರವನ್ನು ಪ್ರಕಟಿಸಿತ್ತು. ಈಗ ಈ ಮಾರಾಟ ಪ್ರಕ್ರಿಯೆಯು ಅಂತಿಮ ಹಂತಕ್ಕೆ ತಲುಪಿದ್ದು, ಕೇವಲ ಇಬ್ಬರು ಬಿಡರ್‌ಗಳು ಮಾತ್ರ ರೇಸ್‌ನಲ್ಲಿ ಉಳಿದುಕೊಂಡಿದ್ದಾರೆ.

ಸ್ವೀಡನ್ ಮೂಲದ ಇಕ್ವಿಟಿ ಸಂಸ್ಥೆ ಇಕ್ಯೂಟಿ ಮತ್ತು ಮಣಿಪಾಲ್ ಆಸ್ಪತ್ರೆಯ ರಂಜನ್ ಪೈ ಅವರ ನೇತೃತ್ವದ ಒಕ್ಕೂಟವು ಅಧಿಕೃತವಾಗಿ ಬಿಡ್ ಸಲ್ಲಿಸಿವೆ. ರಂಜನ್ ಪೈ ಅವರ ಒಕ್ಕೂಟದಲ್ಲಿ ಅಮೆರಿಕದ ಕೆಕೆಆರ್ ಮತ್ತು ಸಿಂಗಾಪುರದ ಟೆಮಾಸೆಕ್ ಹೂಡಿಕೆ ಸಂಸ್ಥೆಗಳು ಕೂಡ ಭಾಗಿಯಾಗಿವೆ.

ಆರಂಭದಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ಮಾಲೀಕರಾದ ಗ್ಲೇಜರ್ಸ್ ಕುಟುಂಬ ಮತ್ತು ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಅದಾರ್ ಪೂನಾವಾಲಾ ಅವರು ಆರ್‌ಸಿಬಿ ಖರೀದಿಸಲು ಆಸಕ್ತಿ ತೋರಿದ್ದರು. ಆದರೆ ಇತ್ತೀಚಿನ ಬೆಳವಣಿಗೆಯ ಪ್ರಕಾರ, ಇವರು ಈ ರೇಸ್‌ನಿಂದ ಹಿಂದೆ ಸರಿದಿದ್ದಾರೆ. ಗ್ಲೇಜರ್ಸ್ ಕುಟುಂಬವು 1.8 ಶತಕೋಟಿ ಡಾಲರ್ ಮೊತ್ತದ ಆಫರ್ ನೀಡಿದ್ದರೂ ಸಹ ಅಂತಿಮ ಹಂತದಲ್ಲಿ ಬಿಡ್ ಸಲ್ಲಿಸದಿರಲು ನಿರ್ಧರಿಸಿದೆ. ಒಂದು ವೇಳೆ ಈ ವ್ಯವಹಾರವು 1.8 ಶತಕೋಟಿ ಅಥವಾ 2 ಶತಕೋಟಿ ಡಾಲರ್‌ಗೆ ಪೂರ್ಣಗೊಂಡರೆ, ಇದು ಐಪಿಎಲ್ ಇತಿಹಾಸದ ಅತ್ಯಂತ ದುಬಾರಿ ವ್ಯವಹಾರವಾಗಲಿದೆ. ಈ ಹಿಂದೆ 2021 ರಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ಆರ್‌ಪಿಎಸ್‌ಜಿ ಗ್ರೂಪ್ 7,500 ಕೋಟಿ ರೂ.ಗೆ ಖರೀದಿಸಿತ್ತು. ಆರ್‌ಸಿಬಿ ಮಾರಾಟದ ಮೊತ್ತವು ಇದರ ದುಪ್ಪಟ್ಟಾಗುವ ಸಾಧ್ಯತೆ ದಟ್ಟವಾಗಿದೆ.

ಮಾರ್ಚ್ 16ರಂದು ಬಿಡ್ ಸಲ್ಲಿಸಲು ಕೊನೆಯ ದಿನವಾಗಿತ್ತು. ಮುಂದಿನ 45 ರಿಂದ 90 ದಿನಗಳ ಒಳಗಾಗಿ ಮಾರಾಟ ಪ್ರಕ್ರಿಯೆಯು ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಡಿಯಾಜಿಯೊ ಸಂಸ್ಥೆಯು ಮಾರ್ಚ್ 21ರ ಒಳಗೆ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಲು ಗುರಿ ಹಾಕಿಕೊಂಡಿದೆ. ಬಿಸಿಸಿಐ ಅನುಮತಿಯ ನಂತರ ಅಧಿಕೃತವಾಗಿ ಮಾಲೀಕತ್ವ ಹಸ್ತಾಂತರವಾಗಲಿದೆ.

# ಭಾರತದ ಕ್ಷಿಪಣಿ ಜ್ಞಾನ ಸಂಪತ್ತು ಮತ್ತು ಸಾಧನೆ

ಬ್ರಿಟಿಷ್ ಆಳ್ವಿಕೆಯು ಭಾರತದ ವಿಭಜನೆಯ ನಂತರ, ಎರಡು ಪ್ರತ್ಯೇಕ ರಾಷ್ಟ್ರಗಳು ರೂಪು ಗೊಂಡವು, ಭಾರತ (ಹಿಂದೂಗಳ ಪ್ರಾಬಲ್ಯ) ಮತ್ತು ಪಾಕಿಸ್ತಾನ (ಮುಸ್ಲಿಮರ ಪ್ರಾಬಲ್ಯ). ಸ್ವಾತಂತ್ರ್ಯದ ನಂತರ ರಾಜತಾಂತ್ರಿಕ ಸಂಬಂಧ ಗಳು ಸ್ಥಾಪನೆಯಾದರೂ, ವಿಭಜನೆ ನಂತರ ತಕ್ಷಣದ ಹಿಂಸಾತ್ಮಕ ಘಟನೆಗಳು, ಯುದ್ಧಗಳು, ಭಯೋತ್ಪಾದಕ ದಾಳಿಗಳು ಮತ್ತು ಹಲವಾರು ಪ್ರಾದೇಶಿಕ ವಿವಾದಗಳು ಇನ್ನಷ್ಟು ಜಟಿಲಗೊಳಿಸಿ ಸಂಬಂಧವನ್ನು ಹದಗೆಡಿಸಿದೆ.

1947ರಲ್ಲಿ ಸ್ವಾತಂತ್ರ್ಯ ಪಡೆದಾಗಿನಿಂದ, ಎರಡೂ ದೇಶಗಳು ಮೂರು ಪ್ರಮುಖ ಯುದ್ಧಗಳನ್ನು, ಒಂದು ಅಘೋಷಿತ ಯುದ್ಧವನ್ನು ಮಾಡಿವೆ ಮತ್ತು ಸಶಸ್ತ್ರ ಕದನಗಳು ಮತ್ತು ಗಡಿಗಳಲ್ಲಿ ಮಿಲಿಟರಿ ನಿಲುಗಡೆಗಳಲ್ಲಿ ಭಾಗಿಯಾಗಿವೆ.1971 ರ ಭಾರತ–ಪಾಕಿಸ್ತಾನ ಯುದ್ಧವನ್ನು ಹೊರತುಪಡಿಸಿ, ಕಾಶ್ಮೀರದ ವಿವಾದವು ಈ ಎಲ್ಲಾ ಸಂಘರ್ಷಗಳ ಪ್ರಮುಖ ಕೇಂದ್ರಬಿಂದುವಾಗಿದೆ, ಇದರ ಪರಿಣಾಮವಾಗಿ ಪೂರ್ವ ಪಾಕಿಸ್ತಾನ (ಈಗ ಬಾಂಗ್ಲಾದೇಶ) ಪ್ರತ್ಯೇಕವಾಯಿತು. 1971ರ ಯುದ್ಧದಲ್ಲಿ ಪೂರ್ವ–ಪಶ್ಚಿಮ ಎರಡೂ ಗಡಿಯೊಳಗೆ ಭಾರತದ ಸೈನ್ಯವು ಸಂಪೂರ್ಣವಾಗಿ ಮುನ್ನುಗ್ಗಿ ಡಾಕ, ಕರಾಚಿ ಮತ್ತು ಲಾಹೋರ್ ನಗರಗಳ ವರೆಗೆ ಕಾದಾಟವಾಗಿ ವಶಪಡಿಸಿಕೊಳ್ಳುವ ಹಂತಕ್ಕೆ ಬಂದು 93 ಸಾವಿರ ಪಾಕಿಸ್ತಾನಿ ಸೈನಿಕರು ಶರಣಾಗತಿ ಕೋರಿ ಭಾರತದ ಮುಂದೆ ಮಂಡಿಯೂರಿದ್ದರು. ಆದರೆ 1972ರ ನಂತರ ದ್ವಿಪಕ್ಷೀಯ ಸಂಬಂಧಗಳನ್ನು ಸುಧಾರಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಯಿತು, ಇದು ಸ್ವಲ್ಪ ಮಟ್ಟಿಗೆ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಯಿತು. ಆದಾಗ್ಯೂ, ಆಗಾಗ್ಗೆ ಭಯೋತ್ಪಾದಕ ದಾಳಿಗಳು ಮತ್ತು ಕದನ ವಿರಾಮ ಉಲ್ಲಂಘನೆಗಳಿಂದಾಗಿ ಈ ಪ್ರಯತ್ನ ಗಳಿಗೆ ಅಡ್ಡಿಯಾಯಿತು. ನ್ಯಾಯಯುತವಾಗಿ ಭಾರತಕ್ಕೆ ಸೇರಬೇಕಾದ ಕಾಶ್ಮೀರವನ್ನು ತನ್ನ ದಾಗಿಸಿಕೊಳ್ಳಲು ದೇಶಕ್ಕೆ ಸ್ವಾತಂತ್ರ್ಯ ಬಂದಾಗಿ ನಿಂದಲೂ ಪಾಕಿಸ್ತಾನ ಅನೇಕ ತಂತ್ರ–ಕುತಂತ್ರ ಗಳನ್ನು ನಡೆಸುತ್ತಾ ಅಡ್ಡ ಹಾಕುತ್ತಾ ಭಯೋತ್ಪಾದನೆ ಮೂಲಕ ಕಾಶ್ಮೀರ ಮತ್ತು ಭಾರತದ ಆಂತರಿಕ ಭದ್ರತೆಯನ್ನು ಅಭದ್ರಗೊಳಿಸುತ್ತಾ ಬಂದಿದೆಯಾದರೂ ಅದಕ್ಕೆ ದಿಟ್ಟ ಪ್ರತ್ಯುತ್ತರಗಳ ಮೂಲಕ ಭಾರತ ಕಾಲಕಾಲಕ್ಕೆ ಉತ್ತರ ನೀಡುತ್ತಲೇ ಬಂದಿದೆ.

ಶ್ರೀ ನರೇಂದ್ರ ಮೋದಿಯವರು 2014ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ದಿನದಿಂದಲೇ ದೇಶ ರಕ್ಷಣೆಗೆ ಹಿಂದೆಂದಿಗಿಂತ ಗರಿಷ್ಠ ಅದ್ಯತೆ ನೀಡಿ ಹಲವಾರು ರಕ್ಷಣಾ ಕ್ರಮಗಳನ್ನು ಕೈಗೊಂಡರು. ಸೇನಾಪಡೆಗಳ (ಭೂಸೇನೆ, ವಾಯುಪಡೆ ಮತ್ತು ನೌಕಾದಳ) ಬಲವರ್ಧನೆ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಗೆ ಪ್ರತಿ ಬಜೆಟ್‌ನಲ್ಲೂ ಕೋಟಿಗಟ್ಟಲೇ ವಿಶೇಷ ಅನುದಾನ ನೀಡುತ್ತಲೇ ಬಂದಿದ್ದಾರೆ. 35,000 ಕೋಟಿ ರೂ.ಗಳ ವೆಚ್ಚದಲ್ಲಿ ಎಸ್400 ಟ್ರ್ರಯ್ಯಂಪ್ ಸ್ಕ್ವಾರ್ಡನ್‌ಗಳು ಸೇರಿದಂತೆ ಅತ್ಯಂತ ಬಲಿಷ್ಟ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಸಾಧನಗಳು ಭಾರತೀಯ ಸೇನಾಪಡೆಗಳ ಬತ್ತಳಿಕೆಗೆ ಸೇರಿವೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ), ಸಂಶೋಧನೆ ಮತ್ತು ವಿಶ್ಲೇಷಣೆ ಘಟಕ (ರಾ), ಎಚ್‌ಎಎಲ್ ಸೇರಿದಂತೆ ರಕ್ಷಣಾ ಉಪಕರಣಗಳು ಮತ್ತು ಅತ್ಯಾಧುನಿಕ ಯುದ್ಧ ವಿಮಾನಗಳ ನಿರ್ಮಾಣಕ್ಕೆ ಹೆಚ್ಚಿನ ಅದ್ಯತೆ ನೀಡಿದ್ದಾರೆ. ಕಳೆದ 11 ವರ್ಷ ಗಳಲ್ಲಿ ಭಾರತೀಯ ಸೇನೆ ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಪಡೆಗಳಲ್ಲೊಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.



ಭಾರತದ ವಿರುದ್ಧ ಸದಾ ಹಗೆತನ ಸಾಧಿಸುತ್ತಿರುವ ಶಕುನಿ ಪಾಕಿಸ್ತಾನದ ನೂರಾರು ಡ್ರೋಣ್ ಮತ್ತು ಕ್ಷಿಪಣಿಗಳಿಂದ ಭಾರತದ 15ಕ್ಕೂ ಹೆಚ್ಚು ನಗರಗಳು ಮತ್ತು ಲಕ್ಷಾಂತರ ಭಾರತೀಯರನ್ನು ರಕ್ಷಿಸುವಲ್ಲಿ ಆಕಾಶ್ ಕ್ಷಿಪಣಿಯ ಸೃಷ್ಟಿಕರ್ತ ಡಾ. ಪ್ರಹ್ಲಾದ್ ರಾಮರಾವ್ ಪ್ರಮುಖ ಪಾತ್ರ ವಹಿಸಿದ್ದಾರೆ. ಇವರು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ)ಯ ಮಾಜಿ ವಿಜ್ಞಾನಿ ಮತ್ತು ಹೆಮ್ಮೆಯ ಕನ್ನಡಿಗ.

ಪಾಕಿಸ್ತಾನದಿಂದ ತೂರಿಬಂದ ಅಪಾಯಕಾರಿ ಡ್ರೋಣ್‌ಗಳು ಮತ್ತು ಕ್ಷಿಪಣಿಗಳನ್ನು ನಿಗ್ರಹಿಸಿದ ಆಕಾಶ್ ಕ್ಷಿಪಣಿ್ಥ ಮತ್ತು ಎಸ್*400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ವಹಿಸಿದ ಪಾತ್ರವನ್ನು ಭಾರತೀಯರು ಮರೆಯುವುದಿಲ್ಲ. ವೈರಿಗಳ ದುರಾಕ್ರಮಣದಿಂದ ಭಾರತವನ್ನು ಮತ್ತು ಪ್ರಜೆಗಳನ್ನು ರಕ್ಷಿಸುವಲ್ಲಿ ಆಕಾಶ್ ಕ್ಷಿಪಣಿ ರಕ್ಷಣಾ ವ್ಯವಸ್ಥೆಯು ಅತ್ಯಂತ ಸಮರ್ಥ ರೀತಿಯಲ್ಲಿ ಕಾರ್ಯನಿರ್ವಹಿಸಿದೆ. ಇದರ ರೂವಾರಿ ಭಾರತದ 'ಕ್ಷಿಪಣಿ ಮಾನವ' ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಪ್ರಹ್ಲಾದ್ ರಾಮರಾವ್.

ಮೇ 8 ಮತ್ತು 9 ರಂದು ಭಾರತೀಯ ನಗರಗಳಿಗೆ ಪಾಕಿಸ್ತಾನಿ ಡ್ರೋನ್‌ಗಳು ಮತ್ತು ಕ್ಷಿಪಣಿಗಳು ಭಾರೀ ಗಂಡಾಂತರವನ್ನು ತಂದೊಡ್ಡಿದ್ದವು. ಆದರೆ 15 ವರ್ಷಗಳ ಹಿಂದೆ ಅಭಿವೃದ್ಧಿಪಡಿಸಲಾದ ಅತ್ಯಂತ ಸಮರ್ಥ ಕ್ಷಿಪಣಿ ವ್ಯವಸ್ಥೆಯು ಅಪಾಯವನ್ನು ನಿಗ್ರಹಿಸಿದಲ್ಲದೇ ಭವ್ಯ ರಕ್ಷಣಾ ಗೋಡೆಯಾಗಿ ದೇಶ ರಕ್ಷಣೆಗೆ ನಿಂತಿತು. ವೈಮಾನಿಕ ದಾಳಿಯ ವಿರುದ್ಧ ಭಾರತದ ಗುರಾಣಿಯಾದ 'ಆಕಾಶ್' ಭೂಮಿಯಿಂದ ಆಗಸಕ್ಕೆ ಚಿಮ್ಮಿ ಶತ್ರುಗಳ ಆಕ್ರಮಣವನ್ನು ಭೇದಿಸುವ ಕ್ಷಿಪಣಿ ವ್ಯವಸ್ಥೆಯಾಗಿ ಮುಂಚೂಣಿಯಲ್ಲಿತ್ತು, ಶತ್ರುಗಳ ಬೆದರಿಕೆಗಳನ್ನು ನಿಖರವಾಗಿ ಪ್ರತಿಬಂಧಿಸಿ ಗಂಡಾಂತರವನ್ನು ತಟಸ್ಥಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಈ ಕ್ಷಿಪಣಿ ವ್ಯವಸ್ಥೆಯ ಅಭಿವೃದ್ಧಿಯನ್ನು ಯಶಸ್ವಿಯಗಿ ಮುನ್ನಡೆಸಿದ ಕೀರ್ತಿ ವಿಜ್ಞಾನಿ ಡಾ. ಪ್ರಹ್ಲಾದ ರಾಮರಾವ್ ಅವರಿಗೆ ಸಲ್ಲುತ್ತದೆ.

"ಇದು ನನ್ನ ಜೀವನದ ಅತ್ಯಂತ ಸಂತೋಷದ ದಿನ... ಶತ್ರುಗಳ ವೈಮಾನಿಕ ಗುರಿಗಳನ್ನು ಇಷ್ಟೊಂದು ನಿಖರತೆ ಮತ್ತು ಸೊಬಗಿನಿಂದ ಹೊಡೆಯುವಲ್ಲಿ ನಾನು ಸಹಾಯ ಮಾಡಿದ ಕ್ಷಿಪಣಿ ನೆರವಾಗಿದೆ. ಆಕಾಶ್ ಬಹು ಗುರಿಗಳನ್ನು ಯಶಸ್ವಿಯಾಗಿ ಎದುರಿಸಿದೆ. ಇದು ನಿರೀಕ್ಷೆಗಳನ್ನು ಮೀರಿ ಕಾರ್ಯನಿರ್ವಹಿಸಿದೆ. ಭಾರತದೊಳಗೆ ಬರುವ ವೈರಿಗಳ ಬೆದರಿಕೆಗಳನ್ನು (ಡ್ರೋಣ್ ಮತ್ತು ಕ್ಷಿಪಣಿ ದಾಳಿಗಳನ್ನು) ಪರಿಣಾಮಕಾರಿಯಾಗಿ ಮತ್ತು ನಿಖರವಾಗಿ ಭೇದಿಸಿದೆ" ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ ಡಾ. ರಾವ್.

**ಆಕಾಶ್ ಎಂಬ ಬ್ರಹ್ಮಾಸ್ತ್ರ**

ಆಕಾಶ್ ಕ್ಷಿಪಣಿ ವ್ಯವಸ್ಥೆಯು ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಯಾಗಿದೆ. ಇದರ ಆಂತರ್ನಿರ್ಮಿತ ಎಲೆಕ್ಟ್ರಾನಿಕ್ ನಿರ್ದೇಶಿತ ಮಾರ್ಗಗಳೊಂದಿಗೆ, 20 ಕಿ.ಮೀ ಎತ್ತರದ ಗುರಿಗಳನ್ನು ನಿಖರವಾಗಿ ಭೇದಿಸುವ ಅಗಾಧ ಸಾಮರ್ಥ್ಯ ಹೊಂದಿದೆ.

ಪಾಕ್ ದಾಳಿ ಪ್ರಯತ್ನಗಳನ್ನು ವಿಫಲಗೊಳಿಸಲು ಭಾರತ ಆಕಾಶ್ ಕ್ಷಿಪಣಿ ಮತ್ತು ವಾಯು ರಕ್ಷಣಾ ವ್ಯವಸ್ಥೆಯನ್ನು ನಿಯೋಜಿಸಲಾಗಿತ್ತು. ಅವು ಅತ್ಯಂತ ಸಮರ್ಥವಾಗಿ ಕಾರ್ಯನಿರ್ವಹಿಸಿವೆ. ಭಾರತದ 15 ನಗರಗಳ ಮೇಲೆ ದಾಳಿ ಮಾಡುವ ಪಾಕಿಸ್ತಾನದ ಪ್ರಯತ್ನಗಳನ್ನು ವಿಫಲಗೊಳಿಸುವಲ್ಲಿ ಭಾರತವು ಬರಾಕ್– 8 ಕ್ಷಿಪಣಿಗಳು, ಎಸ್–400 ಟ್ರಯಂಫ್ ವಾಯು ರಕ್ಷಣಾ ವ್ಯವಸ್ಥೆಗಳು, ಆಕಾಶ್ ಕ್ಷಿಪಣಿಗಳು ಮತ್ತು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಡ್ರೋನ್ ವಿರೋಧಿ ಉಪಕರಣಗಳನ್ನು ನಿಯೋಜಿಸಲಾಗಿತ್ತು. ಇವು ಪಾಕಿಸ್ತಾನದ ನೂರಾರು ಡ್ರೋಣ್‌ಗಳು ಮತ್ತು ಕ್ಷಿಪಣಿಯನ್ನು ಹೊಡೆದುರುಳಿಸಿವೆ.

ಆವಂತಿಪುರ, ಶ್ರೀನಗರ, ಜಮ್ಮು, ಪಠಾಣ್‌ಕೋಟ್, ಅಮೃತಸರ, ಕಪುರ್ತಲಾ, ಜಲಂಧರ್, ಲೂಧಿಯಾನ, ಆದಂಪುರ, ಭಟಿಂಡಾ, ಚಂಡೀಗಢ, ನಾಲ್, ಫಲೋಡಿ, ಉತ್ತರಲೈ ಮತ್ತು ಭುಜ್‌ಗಳನ್ನು ಗುರಿಯಾಗಿಸಲು ಪಾಕಿಸ್ತಾನಿ ಸೇನೆಯು ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಬಳಸಿ ಪ್ರಯತ್ನಿಸಿತು. ವೈರಿ ದೇಶದ ದುರಾಕ್ರಮವನ್ನು ಯಶಸ್ವಿಯಾಗಿ ಭಾರತ ಹಿಮ್ಮೆಟ್ಟಿಸಿದೆ.

ಪಾಕಿಸ್ತಾನದ ಪ್ರತಿಯೊಂದು ಡ್ರೋಣ್ ಮತ್ತು ಕ್ಷಿಪಣಿಯನ್ನು ತಡೆಹಿಡಿಯಲಾಯಿತು ಅಥವಾ ತಟಸ್ಥಗೊಳಿಸಲಾಯಿತು. ವೈರಿ ದೇಶದ ಉದ್ದೇಶಿತ ಗುರಿಯನ್ನು ತಲುಪಲು ನಮ್ಮ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳು ಬಿಡಲಿಲ್ಲ. ಇಂಥ ನಿಖರ ರಕ್ಷಣಾ ವ್ಯವಸ್ಥೆ ಬಗ್ಗೆ ಅಮೆರಿಕ ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳು ಬೆಚ್ಚಿ ಬೆರಗಾಗಿವೆ.

**'ಮಿಸ್ಸೈಲ್ ಮ್ಯಾನ್' ಡಾ. ಪ್ರಹ್ಮಾದ್ ರಾಮರಾವ್**

ಇವರು ಭಾರತದ "ಕ್ಷಿಪಣಿ ಮನುಷ್ಯ" ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರಿಂದ ಆಯ್ಕೆಯಾದ ರಾಮರಾವ್, ಆಕಾಶ್ ಕಾರ್ಯಕ್ರಮ ಪ್ರಾರಂಭವಾದಾಗ ಅದಕ್ಕೆ ಅತ್ಯಂತ ಕಿರಿಯ ಯೋಜನಾ ನಿರ್ದೇಶಕರಾಗಿದ್ದರು.

ವೈರಿಗಳ ಡ್ರೋನ್‌ಗಳು, ಕ್ಷಿಪಣಿಗಳು, ಹೆಲಿಕಾಪ್ಟರ್‌ಗಳು ಮತ್ತು ಪಾಕಿಸ್ತಾನಿ ಪೈಲಟ್‌ಗಳು ಹಾರಿಸುವ ಸೂಪರ್‌ಸಾನಿಕ್ ಎಫ್–16 ಫೈಟರ್ ಜೆಟ್‌ಗಳಂತಹ ಅತಿ ವೇಗದ ಬೆದರಿಕೆಗಳನ್ನು ಪ್ರತಿಬಂಧಿಸಲು ನಾವು ಆಕಾಶ್‌ನಂತಹ ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ವಿನ್ಯಾಸಗೊಳಿಸಿದ್ದೇವೆ ಎಂದು ಹೇಳುತ್ತಾರೆ ಡಾ.ರಾವ್.

ಡಿಆರ್‌ಡಿಓ ಅಭಿವೃದ್ಧಿಪಡಿಸಿದ ಮತ್ತು ಭಾರತ್ ಡೈನಾಮಿಕ್ಸ್ ಲಿಮಿಟೆಡ್ ನಿರ್ಮಿಸಿದ ಆಕಾಶ್ ವ್ಯವಸ್ಥೆಯು ಭಾರತದ ವಾಯು ರಕ್ಷಣೆಯ ಮೂಲಾಧಾರವಾಗಿದೆ. ಇದು ಪೋರ್ಟಬಲ್, ಹೆಚ್ಚು ಚುರುಕು, ಕರಾರುವಾಕ್ಕು, ನಿಖರ ಮತ್ತು ಮಾರಕವಾಗಿದೆ. ಮುಂದುವರಿದ ಆಕಾಶ್–ಎನ್‌ಜಿ ರೂಪಾಂತರವು ಗಂಟೆಗೆ 2,500 ಕಿಮೀ ವೇಗದಲ್ಲಿ 80 ಕಿಮೀ ದೂರದ ಗುರಿಗಳನ್ನು ಹೊಡೆಯುವ ಸಾಮರ್ಥ್ಯವನ್ನು ಹೊಂದಿದೆ. ಇದು ಏಕಕಾಲದಲ್ಲಿ 64 ಗುರಿಗಳನ್ನು ಗುರಿಯಾಗಿಸುತ್ತದೆ ಮತ್ತು ಏಕಕಾಲದಲ್ಲಿ 12 ಕ್ಷಿಪಣಿಗಳನ್ನು ಹಾರಿಸುವಷ್ಟು ಶಕ್ತಿಶಾಲಿಯಾಗಿದೆ.

ರಾಮರಾವ್ ಅವರ ಐತಿಹಾಸಿಕ ವೃತ್ತಿಜೀವನದಲ್ಲಿ ಆಕಾಶ್ ಕೇವಲ ಒಂದು ಅಧ್ಯಾಯ. ಅವರು ಭಾರತದಲ್ಲಿ ಅಭಿವೃದ್ಧಿಪಡಿಸಲಾದ ಬಹುತೇಕ ಎಲ್ಲಾ ರೀತಿಯ ಕ್ಷಿಪಣಿಗಳಲ್ಲಿ ಕೆಲಸ ಮಾಡಿದ್ದಾರೆ. ಭೂಮಿಯಿಂದ ಗಗನಕ್ಕೆ ಚಿಮ್ಮುವ ಚಿಮ್ಮುವ ಕ್ಷಿಪಣಿಗಳು, ಆಗಸದಿಂದ ಆಗಸಕ್ಕೆ ಚಿಮ್ಮುವ ಕ್ಷಿಪಣಿಗಳು ಹಾಗೂ ಸಮುದ್ರದಿಂದ ಭೂಮಿ ಮತ್ತು ಆಗಸಕ್ಕೆ ಚಿಮ್ಮುವ ಕ್ಷಿಪಣಿಗಳ ವಿನ್ಯಾಸ ಮತ್ತು ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಬೆಂಗಳೂರಿನಲ್ಲಿ ಆಕಾಶ್ ಕ್ಷಿಪಣಿಯ ಯೋಜನಾ ನಿರ್ದೇಶಕರಾಗಿ ಮಹತ್ವದ ಕೆಲಸ ಮಾಡಿದ್ದಾರೆ. ಆಕಾಶ್ ಕ್ಷಿಪಣಿ ರಕ್ಷಣಾ ವ್ಯವಸ್ಥೆಯ ಹೊರತಾಗಿ, ಡಾ. ರಾಮರಾವ್ ಅವರು ಭಾರತದಲ್ಲಿ ಅಭಿವೃದ್ಧಿಪಡಿಸಲಾದ ಬಹುತೇಕ ಎಲ್ಲಾ ರೀತಿಯ ಕ್ಷಿಪಣಿಗಳ ತಯಾರಿಕೆಯಲ್ಲಿ ಕೆಲಸ ಮಾಡಿದ್ದಾರೆ. ಅಲ್ಲದೇ ಪೃಥ್ವಿ, ಅಗ್ನಿ ಮತ್ತು ನಾಗ್ ಕ್ಷಿಪಣಿಗಳ ಮುಖ್ಯ ವಿನ್ಯಾಸಗಾರರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಬ್ರಹ್ಮೋಸ್ ಅತ್ಯಾಧುನಿಕ ಕ್ಷಿಪಣಿಯ ಯೋಜನಾ ನಿರ್ದೇಶಕರಾಗಿಯೂ ಇವರು ಕೆಲಸ ಮಾಡಿ ಗಮನಸೆಳೆದಿದ್ದಾರೆ. ಇಂಡೋ–ರಷ್ಯಾದ ಜಂಟಿ ಕ್ಷಿಪಣಿ ಅಭಿವೃದ್ಧಿಯಲ್ಲಿಯೂ ಇವರ ಸೇವೆ ಅನನ್ಯ. ಡಾ.ರಾವ್ 10ಕ್ಕಿಂತಲೂ ಹೆಚ್ಚು ರೀತಿಯ ಕ್ಷಿಪಣಿ ವಿನ್ಯಾಸ ಮತ್ತು ಸೃಷ್ಟಿಗಳಲ್ಲಿ ಕೆಲಸ ಮಾಡಿದ್ದಾರೆ.

ರಾಮರಾವ್ ಅವರ ಪ್ರಕಾರ, ಭಾರತದ ಕ್ಷಿಪಣಿಗಳು ವೆಚ್ಚ–ಪರಿಣಾಮಕಾರಿ, ಬಳಕೆದಾರ ಸ್ನೇಹಿ ಮತ್ತು ಕಾರ್ಯಕ್ಷಮತೆ–ಸ್ಪರ್ಧಾತ್ಮಕವೆಂದು ಪರಿಗಣಿಸಲ್ಪಟ್ಟಿದ್ದು, ವಿಶ್ವಾದ್ಯಂತ ರಕ್ಷಣಾ ಖರೀದಿದಾರರಿಗೆ ಅತ್ಯಂತ ಪ್ರಬಲ ಅಸ್ತ್ರಗಳಾಗಿವೆ.

"ನನ್ನ ಮಗು ಶತ್ರುಗಳ ವೈಮಾನಿಕ ಗುರಿಗಳನ್ನು ಹೊಡೆದುರುಳಿಸುವಲ್ಲಿ ನಿಖರವಾಗಿ ಮತ್ತು ಸುಂದರವಾಗಿ ಕೆಲಸ ಮಾಡುತ್ತಿರುವುದನ್ನು ನೋಡಿ ನನಗೆ ತುಂಬಾ ಸಂತಸವಾಗಿದೆ. ಇದು ನಿರೀಕ್ಷೆಗಳನ್ನು ಮೀರಿ ಕೆಲಸ ಮಾಡಿದೆ... ದೇಶದೊಳಗೆ ನುಗ್ಗಿ ಬರುವ ವೈರಿಗಳ ಗುರಿಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿದೆ ಎಂದು ಡಾ. ರಾವ್ ಹೆಮ್ಮೆಯಿಂದ ಹೇಳಿದ್ದಾರೆ.

ಇದು ಭಾರತವು 75 ವರ್ಷಗಳಲ್ಲಿ ಕ್ಷಿಪಣಿ ತಂತ್ರಜ್ಞಾನದಲ್ಲಿ ದೇಶೀಯವಾಗಿ ಅಭಿವೃದ್ಧಿ ಹೊಂದಿ ಸ್ವಾವಲಂಬನೆ ಮತ್ತು ಸಂರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿ ಸಾಧನೆ ಮಾಡಿರುತ್ತದೆ. ಇದರಿಂದಾಗಿ ಇತ್ತೀಚಿನ ಭಾರತ ಪಾಕಿಸ್ತಾನ್ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಯಿಂದ 20 ಕಿ.ಮೀ. ಎತ್ತರದ ಮತ್ತು ಆಳದ ಗುರಿಗಳನ್ನು ನಿಖರವಾಗಿ ಬೇಧಿಸಿ ಶತ್ರುಗಳ ಹುಟ್ಟಡಗಿಸಿದೆ. ಮತ್ತು ವ್ಯಾಪಕ ಹಾನಿಗೊಳಿಸಿರುತ್ತದೆ.

# ಭಗವದ್‌ಗೀತಾ ಶ್ಲೋಕ.... ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ

**ಭಾ**ರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಭಗವದ್ಗೀತೆಗೆ ವಿಶೇಷ ಸ್ಥಾನವಿದೆ. ಮಾನವ ಜೀವನದ ಸಂಕಷ್ಟಗಳಿಗೆ ದಾರಿದೀಪವಾಗಿರುವ ಈ ಗ್ರಂಥದಲ್ಲಿ, ಜೀವನ ಮತ್ತು ಮರಣದ ನಿತ್ಯ ಸತ್ಯವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಅದರಲ್ಲಿಯೇ ಅಧ್ಯಾಯ 2ರ 28ನೇ ಶ್ಲೋಕವು ಮಾನವನ ಶೋಕಭಾವವನ್ನು ನಿವಾರಿಸುವ ಮಹತ್ವದ ಸಂದೇಶವನ್ನು ನೀಡುತ್ತದೆ.


ಇಂದಿನ ವೇಗದ ಬದುಕಿನಲ್ಲಿ, ಮರಣ ಅಥವಾ ನಷ್ಟ ಎದುರಾದಾಗ ಮಾನವನು ಮಾನಸಿಕವಾಗಿ ಕುಗ್ಗುವ ಸಂದರ್ಭಗಳು ಹೆಚ್ಚಾಗುತ್ತಿವೆ. ಅಂಥ ಸಮಯದಲ್ಲಿ ಗೀತೆಯ ಈ ಸಂದೇಶ ಮನಸ್ಸಿಗೆ ಧೈರ್ಯ ಮತ್ತು ಸಮತೋಲನ ನೀಡುತ್ತದೆ. "ನಾವು ನೋಡುವುದು ಕೇವಲ ಮಧ್ಯದ ಹಂತ; ಆರಂಭ ಮತ್ತು ಅಂತ್ಯವು ಅಪ್ರತ್ಯಕ್ಷ" ಎಂಬ ತತ್ತ್ವವು ದುಃಖವನ್ನು ಸಮಾಧಾನದಲ್ಲಿ ಪರಿವರ್ತಿಸಲು ನೆರವಾಗುತ್ತದೆ.

"ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ; ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ" ಎಂಬ ಶ್ಲೋಕದಲ್ಲಿ, ಜೀವಿಗಳ ಸ್ವರೂಪವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಎಲ್ಲ ಜೀವಿಗಳು ಹುಟ್ಟುವ ಮೊದಲು ಅವ್ಯಕ್ತವಾಗಿದ್ದು, ಜನನದ ನಂತರ ಮಾತ್ರ ವ್ಯಕ್ತವಾಗುತ್ತವೆ. ಮರಣದ ನಂತರ ಮತ್ತೆ ಅವ್ಯಕ್ತ ಸ್ಥಿತಿಗೆ ಮರಳುತ್ತವೆ. ಈ ಸತ್ಯವನ್ನು ಅರಿತಾಗ, ಮರಣದ ಬಗ್ಗೆ ಅತಿಯಾದ ದುಃಖಕ್ಕೆ ಅರ್ಥವಿಲ್ಲ ಎಂಬ ಸಂದೇಶವನ್ನು ಗೀತೆ ನೀಡುತ್ತದೆ.

ಶ್ರೀಕೃಷ್ಣನು ಅರ್ಜುನನಿಗೆ ಹೇಳುವ ಮೇಲಿನ ಗೀತಾ ಶ್ಲೋಕದಲ್ಲಿನ ಮಾತುಗಳು ಕೇವಲ ಯುದ್ಧಭೂಮಿಯಲ್ಲಿನ ಉಪದೇಶವಷ್ಟೇ ಅಲ್ಲ; ಅವು ಸಮಸ್ತ ಮಾನವಕುಲಕ್ಕೆ ಅನ್ವಯಿಸುವ ನಿತ್ಯಸತ್ಯಗಳು. ಜೀವನವೆಂಬುದು ತಾತ್ಕಾಲಿಕ ಪ್ರದರ್ಶನ ಮಾತ್ರ; ಆತ್ಮ ಶಾಶ್ವತವಾದದ್ದು ಎಂಬ ತತ್ತ್ವವನ್ನು ಈ ಶ್ಲೋಕ ಸ್ಪಷ್ಟಪಡಿಸುತ್ತದೆ.

ಎಲ್ಲ ಪ್ರಾಣಿಗಳೂ ಮರಣಾನಂತರದಲ್ಲಿ ಅವ್ಯಕ್ತವೇ ಆಗುತ್ತವೆ. ಅದಕ್ಕಾಗಿ ಚಿಂತಿಸುವುದೇಕೆ? ಅರ್ಥಾತ್, ಚಿಂತಿಸಬಾರದು ಎಂದು ಈ ಮಾತಿನ ತಾತ್ಪರ್ಯ. ಮನುಷ್ಯನಿಗೂ ಈ ಜನ್ಮವನ್ನು ದಾಟಿ ತಾನು ಎಲ್ಲಿಗೆ ಹೋಗುತ್ತೇನೆ? ಎನ್ನುವುದು ಗೊತ್ತಾಗುವುದಿಲ್ಲ. ಮರಣದಷ್ಟು ಮುಂದಿನ ಮಾತು ಹಾಗಿರಲಿ, ಈ ಜೀವನವನ್ನೇ ವಿಚಾರಿಸಿ ನೋಡಿದರೂ, ಕೆಲವೊಮ್ಮೆ ನಾವು ಎಲ್ಲಿಗೋ ಹೋಗಬೇಕೆಂದುಕೊಂಡಿರುತ್ತೇವೆ. ಆದರೆ ಹೋಗಿ ತಲುಪುವುದು ಇನ್ನೆಲ್ಲಿಗೋ ಆಗಿರುತ್ತದೆ. ಈ ಬಗ್ಗೆ ಕನ್ನಡದ ದಾರ್ಶನಿಕ ಕವಿ ಡಿ.ವಿ.ಜಿ. ಯವರು 'ಮಂಕುತಿಮ್ಮನ ಕಗ್ಗ'ದಲ್ಲಿ ಹೇಳಿರುವ ಒಂದು ಮಾತು ಈ ರೀತಿ ಇದೆ; 'ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ, ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು, ಮದುವೆಗೋ, ಮಸಣಕೋ ಹೋಗೆಂದ ಕಡೆಗೋಡು, ಪದಕುಸಿಯೆ ನೆಲವಿಹುದು ಮಂಕುತಿಮ್ಮ'. ಮಾನವನ ಬದುಕೇ ಜಟಕಾಬಂಡಿ ಇದ್ದಂತೆ. ಈ ಬಂಡಿಯನ್ನು ನಡೆಸುವವ ವಿಧಿ. ನೀನು ಆ ಬಂಡಿಗೆ ಕಟ್ಟಲ್ಪಟ್ಟ ಕುದುರೆ.

ವಿಧಿ ಎಲ್ಲಿಗೆ ತೆಗೆದುಕೊಂಡು ಹೋದರೂ ನೀನು ಹೋಗಬೇಕು. ಅದು ನಿನ್ನನ್ನು ಮದುವೆಯ ಮಂಗಲಕಾರ್ಯಕ್ಕೂ ಕೊಂಡೊಯ್ಯಬಹುದು, ಸ್ಮಶಾನಕ್ಕೂ ಕೊಂಡೊಯ್ಯಬಹುದು. ಈ ಜೀವನವೇ ಹಾಗೆ. ನಾವು ಏನಾಗಬೇಕೆಂದು ಬಯಸುತ್ತೇವೋ, ಅದಾಗಲು ವಿಧಿ ಎಷ್ಟೋ ಸಲ ಬಿಡುವುದಿಲ್ಲ. ನಾವೆಲ್ಲ ವಿಧಿಯ ಕೈಗೊಂಬೆಗಳು. ಈ ಜನ್ಮದಲ್ಲಿಯೇ ಹೀಗೆ ನಡೆಯುವುದಾದರೆ, ಇನ್ನು ಮರಣದ ನಂತರದ ವಿಷಯವನ್ನು ಕೇಳಬೇಕೆ? ಅದು ಖಂಡಿತವಾಗಿಯೂ ನಮಗೆ ತಿಳಿಯಲಾರದು. ಇದನ್ನೇ ಭಗವಂತನು 'ಅವ್ಯಕ್ತ ನಿಧನಾನ್ಯೇವ' ಮರಣದ ನಂತರವೂ ಈ ಪ್ರಾಣಿಗಳು ಅವ್ಯಕ್ತವಾಗಿಯೇ ಇರುತ್ತವೆ. ಆದ್ದರಿಂದ ನೀನು ದುಃಖಿಸುವ ಅಗತ್ಯವೇ ಇಲ್ಲ ಎಂದು ಅರ್ಜುನನ್ನು ಸಂತೈಸಿದ ಮಾತಿದು.




ಒಟ್ಟಿನಲ್ಲಿ, ಗೀತೆಯ ಈ ಶ್ಲೋಕವು ಜೀವನದ ಅನಿತ್ಯತೆಯನ್ನು ಅರಿತುಕೊಂಡು, ಶಾಶ್ವತ ಸತ್ಯದತ್ತ ಗಮನ ಹರಿಸುವಂತೆ ಮನವಿ ಮಾಡುತ್ತದೆ. ಶೋಕವನ್ನು ಮೀರಿ ಜ್ಞಾನವನ್ನು ಸ್ವೀಕರಿಸುವ ದಾರಿಯನ್ನು ಇದು ತೋರಿಸುತ್ತದೆ. ಇಂತಹ ತತ್ತ್ವಚಿಂತನೆಗಳು ಇಂದಿನ ಸಮಾಜಕ್ಕೂ ಸಮಾನವಾಗಿ ಪ್ರಸ್ತುತವಾಗಿವೆ ಎಂಬುದು ಸ್ಪಷ್ಟ.

### ಬೆಂಗಳೂರಿನಲ್ಲಿ ಮನೆ ಬೆಲೆ ಏರಿಕೆ ಹೆಚ್ಚು

# ದೇಶದ ಎಂಟು ಪ್ರಮುಖ ನಗರಗಳ ಪೈಕಿ ಉದ್ಯಾನನಗರಿಯಲ್ಲಿ ಶೇ.13ರಷ್ಟು ಏರಿಕೆ



**ನ**ವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ನಗರಗಳ ಪೈಕಿ ಬೆಂಗಳೂರಿನಲ್ಲಿ ಮನೆಗಳ ಬೆಲೆಯು ಕಳೆದ ವರ್ಷ ಶೇ. 13ರಷ್ಟು ಏರಿಕೆಯಾಗಿದೆ. ಇದು ದೇಶದ ಎಂಟು ನಗರಗಳ ಪೈಕಿ ಮನೆಗಳ ಬೆಲೆಯಲ್ಲಿನ ಗರಿಷ್ಠ ಪ್ರಮಾಣದ ಹೆಚ್ಚಳ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ಪ್ರಾಪ್ ಟೈಗರ್ ಹೇಳಿದೆ. 2024ರಲ್ಲಿ ಈ ಎಂಟು ನಗರಗಳಲ್ಲಿ ಮನೆಗಳ ಸರಾಸರಿ ಬೆಲೆಯು ಶೇ 17ರಷ್ಟು ಹೆಚ್ಚಳವಾಗಿದ್ದರೆ, ಕಳೆದ ವರ್ಷ ಶೇ 6ರಷ್ಟು ಏರಿಕೆಯಾಗಿದೆ. ಚೆನ್ನೈನಲ್ಲಿ ಮನೆಗಳ ಬೆಲೆಯಲ್ಲಿ ಯಥಾಸ್ಥಿತಿ ಯಲ್ಲಿದ್ದು, ಪ್ರತಿ ಚದರ ಅಡಿ ದರ ರೂ.7,200 ಇದೆ.

2024ರಲ್ಲಿ ಬೆಂಗಳೂರಿನಲ್ಲಿ ಪ್ರತಿ ಚದರ ಅಡಿ ದರ ರೂ. 7,536 ಇತ್ತು. ಇದು 2025ರಲ್ಲಿ ರೂ. 8,533ಕ್ಕೆ ಹೆಚ್ಚಳವಾಗಿದೆ ಎಂದು ಪ್ರಾಪ್ ಟೈಗರ್ ತಿಳಿಸಿದೆ. 'ಬೆಂಗಳೂರು ದೇಶದ ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನದ ರಾಜಧಾನಿ ಯಾಗಿದೆ. ಗುಣಮಟ್ಟದ ಜೀವನ ಬಯಸುವ ಜಾಗತಿಕ ಹೂಡಿಕೆದಾರರು, ವಲಸೆ ಕಾರ್ಮಿಕರಿಗೆ ಬೆಂಗಳೂರು ಆಕರ್ಷಣೆಯ ನಗರವಾಗಿ ಮುಂದುವರಿದಿದೆ' ಎಂದು ಸೌಪರ್ಣಿಕಾ ಪ್ರಾಜೆಕ್ಟ್‌ನ ವ್ಯವಸ್ಥಾಪಕ ನಿರ್ದೇಶಕ ರಾಮ್‌ಜಿ ಸುಬ್ರಮಣಿಯಂ ಹೇಳಿದ್ದಾರೆ.

'ಬೇಡಿಕೆ ಹೆಚ್ಚಳವೇ ಬೆಂಗಳೂರಿನಲ್ಲಿ ಮನೆಗಳ ಬೆಲೆ ಏರಿಕೆಗೆ ಕಾರಣ' ಎಂದು ಆರಿಸ್ ಯುನಿಟರ್ನ್‌ನ ನಿರ್ದೇಶಕ ನವೀನ್‌ಧನುಕ ಹೇಳಿದ್ದಾರೆ. ತಂತ್ರಜ್ಞಾನ ವಲಯ ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳಲ್ಲಿ (ಜಿಸಿಸಿ) ನಿರಂತರವಾಗಿ ಉದ್ಯೋಗ ಸೃಷ್ಟಿ ಆಗುತ್ತಿರುವುದು, ವಲಸೆ ಸ್ಥಿರವಾಗಿರುವುದು ಮತ್ತು ಬೆಂಗಳೂರಿನ ಪೂರ್ವ ಹಾಗೂ ಉತ್ತರ ಭಾಗದಲ್ಲಿನ ಮೂಲ ಸೌಕರ್ಯ ಸುಧಾರಣೆಯು ಮನೆಗಳ ಬೇಡಿಕೆ ಚೆನ್ನಾಗಿ ಇರುವುದಕ್ಕೆ 'ಭೂಮಿ ಬೆಲೆ ಸೇರಿದಂತೆ ಮನೆಗಳ ನಿರ್ಮಾಣ ವೆಚ್ಚ ಹೆಚ್ಚಳವಾಗಿದೆ. ಇದು ಬೆಂಗಳೂರಿನಲ್ಲಿ ಮನೆಗಳ ದರ ಏರಿಕೆ ಕಾರಣ' ಎಂದು ಪ್ರಾಪರ್ಟಿ ಫಸ್ಟ್ ರಿಯಾಕ್ ಸಂಸ್ಥೆಯ ಸಂಸ್ಥಾಪಕ ಮತ್ತು ಸಿಇಹ ಭವೇಶ್ ಕೊಠಾರಿ ಹೇಳಿದ್ದಾರೆ.

ಗುಣಮಟ್ಟದ ಮನೆಗಳ ಲಭ್ಯತೆಯು ಕಡಿಮೆ ಇದೆ. ಹೀಗಾಗಿ, ಖರೀದಿದಾರದ ಹೆಚ್ಚಿನ ಬೆಲೆ ನೀಡಿ ಮನೆ ಖರೀದಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. 2024ರಲ್ಲಿ ದೆಹಲಿ-ಎನ್‌ಸಿಆರ್‌ನ ಮನೆಗಳ ಬೆಲೆಯಲ್ಲಿ ಶೇ.49ರ ಏರಿಕೆಯಾಗಿದ್ದರೆ, ಕಳೆದ ವರ್ಷ ಶೇ.6ರಷ್ಟು ಮಾತ್ರ ಹೆಚ್ಚಳವಾಗಿದೆ ಮನೆಗಳಿಗೆ ಬೇಡಿಕೆ ಕಡಿಮೆ ಆಗಿರುವುದು ಇದಕ್ಕೆ ಕಾರಣ ಎಂದು ತಿಳಿಸಿದೆ.

# "ಹೃದಯಸ್ಪರ್ಶಿ ಚಿತ್ರ ಪೋಸ್ಟ್‌ಕಾರ್ಡ್"

**ಮ**ನಮುಟ್ಟುವ ಭಾವನೆಗಳ ಚಿತ್ರ ಇತ್ತೀಚಿನ ದಿನಗಳಲ್ಲಿ ಬಿಡುಗೆಯಾದ ಚಿತ್ರಗಳ ಪೈಕಿ ಮನಮುಟ್ಟುವ ಭಾವನೆಗಳ ಚಿತ್ರ ಪೋಸ್ಟ್‌ಕಾರ್ಡ್. ಕನ್ನಡ ಚಿತ್ರರಂಗದಲ್ಲಿ ತಂತ್ರಜ್ಞಾನ, ಆಕ್ಷನ್ ಮತ್ತು ಭಾರಿ ಬಜೆಟ್ ಸಿನಿಮಾಗಳ ನಡುವೆ, ಕೆಲ ಚಿತ್ರಗಳು ತಮ್ಮ ಸರಳತೆ ಮತ್ತು ಭಾವನಾತ್ಮಕ ಗಾಢತೆಯಿಂದಲೇ ಪ್ರೇಕ್ಷಕರ ಮನಸ್ಸನ್ನು ಗೆಲ್ಲುತ್ತವೆ. ಅಂತಹ ಚಿತ್ರಗಳಲ್ಲಿ ಕಥಣಬಿಚಿಡಿಜ ಒಂದು ವಿಶಿಷ್ಟ ಸ್ಥಾನ ಪಡೆದುಕೊಂಡಿದೆ.

"Postcard" ಚಿತ್ರವು ಇಂದಿನ ಡಿಜಿಟಲ್ ಯುಗದಲ್ಲಿ ನಿಧಾನವಾಗಿ ಕಣ್ಮರೆಯಾಗುತ್ತಿರುವ ಮಾನವೀಯ ಸಂಬಂಧಗಳ ಮೌಲ್ಯವನ್ನು ನೆನಪಿಸುವ ಪ್ರಯತ್ನ ಮಾಡುತ್ತದೆ. ಮೊಬೈಲ್, ಇಂಟರ್‌ನೆಟ್ ಮತ್ತು ತ್ವರಿತ ಸಂವಹನದ ಕಾಲದಲ್ಲಿ, ಒಂದು ಸರಳ ಪೋಸ್ಟ್ ಕಾರ್ಡ್ ಮೂಲಕ ವ್ಯಕ್ತವಾಗುವ ಭಾವನೆಗಳ ಆಳವನ್ನು ಚಿತ್ರ ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಈ ಹಿನ್ನೆಲೆ ಕಥೆಯುನ್ನು ಹೆಚ್ಚು ಪ್ರೇಕ್ಷಕರ ಮನಸ್ಪರ್ಶಿಸುವಂತೆ ಮಾಡುತ್ತದೆ.

ಚಿತ್ರದ ಕಥಾಸಾರಾಂಶ ಸರಳವಾದದ್ದೇ ಆದರೂ, ಅದರೊಳಗಿನ ಭಾವನೆಗಳು ಗಾಢವಾಗಿವೆ. ನಿರೀಕ್ಷೆ, ನೆನಪು, ಮತ್ತು ಮಾನವ ಸಂಬಂಧಗಳ ಸೂಕ್ಷ್ಮತೆಗಳನ್ನು ಕಥೆಯ ಮೂಲಕ ಅನಾವರಣಗೊಳಿಸಲಾಗುತ್ತದೆ. ಪ್ರೇಕ್ಷಕರಿಗೆ ತಮ್ಮ ಹಳೆಯ ದಿನಗಳನ್ನು ನೆನಪಿಸುವ ಶಕ್ತಿಯನ್ನು ಈ ಚಿತ್ರ ಹೊಂದಿದೆ. ವಿಶೇಷವಾಗಿ ಹಿರಿಯ ಪ್ರೇಕ್ಷಕರಿಗೆ ಈ ಸಿನಿಮಾ ಹೆಚ್ಚು ಹತ್ತಿರವಾಗುವ ಸಾಧ್ಯತೆ ಇದೆ.


ಅಭಿನಯದ ದೃಷ್ಟಿಯಿಂದ, ಚಿತ್ರದಲ್ಲಿನ ಕಲಾವಿದರು ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಅತಿರಂಜಿತ ಅಭಿನಯವಿಲ್ಲದೆ, ಸಹಜವಾಗಿ ಪಾತ್ರವನ್ನು ನಿರ್ವಹಿಸಿರುವುದು ಚಿತ್ರದ ಬಲವಾಗಿದೆ. ಮುಖ್ಯ ಪಾತ್ರಧಾರಿಯ ಭಾವನಾತ್ಮಕ ಪ್ರದರ್ಶನ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುವಂತಿದೆ.

ನಿರ್ದೇಶನವು ಚಿತ್ರದ ಮತ್ತೊಂದು ಮುಖ್ಯ ಆಕರ್ಷಣೆ. ಸರಳ ಕಥೆಯನ್ನು ಅರ್ಥಪೂರ್ಣವಾಗಿ ಹೇಳುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಕಥೆಯ ನಿರೂಪಣೆಯಲ್ಲಿ ಶಾಂತ, ನಿಧಾನ ಗತಿಯು ಕಂಡುಬರುತ್ತದೆ. ಇದು ಕೆಲವರಿಗೆ ಬೋರ್ ಅನ್ನಿಸಬಹುದಾದರೂ, ಕಥೆಯ ಭಾವನಾತ್ಮಕ ಗಾಢತೆಯನ್ನು ಹೆಚ್ಚಿಸುವಲ್ಲಿ ಸಹಕಾರಿ.

ತಾಂತ್ರಿಕವಾಗಿ, ಛಾಯಾಗ್ರಹಣ ಮತ್ತು ಹಿನ್ನೆಲೆ ಸಂಗೀತ ಚಿತ್ರಕ್ಕೆ ಉತ್ತಮ ಬೆಂಬಲ ನೀಡಿವೆ. ಗ್ರಾಮೀಣ ವಾತಾವರಣದ ಸೌಂದರ್ಯವನ್ನು ಕ್ಯಾಮೆರಾ ಚೆನ್ನಾಗಿ ಹಿಡಿದಿದ್ದು, ಸಂಗೀತವು ಕಥೆಯ ಭಾವನೆಗಳನ್ನು ಮತ್ತಷ್ಟು ಗಾಢಗೊಳಿಸುತ್ತದೆ. ಎಡಿಟಿಂಗ್ ಸ್ವಲ್ಪ ಗತಿಯಲ್ಲಿದ್ದರೂ, ಚಿತ್ರದ ಒಟ್ಟಾರೆ ಭಾವನೆಯನ್ನು ಕಾಪಾಡುತ್ತದೆ.

"Postcard" ಚಿತ್ರದ ಮುಖ್ಯ ಶಕ್ತಿ ಅದರ ಸಂದೇಶದಲ್ಲಿದೆ. ವೇಗದ ಜೀವನದಲ್ಲಿ ನಾವು ಮರೆತಿರುವ ಮಾನವೀಯ ಮೌಲ್ಯಗಳನ್ನು ಮತ್ತೆ ನೆನಪಿಸುವ ಪ್ರಯತ್ನ ಈ ಚಿತ್ರ ಮಾಡುತ್ತದೆ. ಸಂಬಂಧಗಳ ಮೌಲ್ಯ, ನಿರೀಕ್ಷೆಯ ಸೌಂದರ್ಯ ಮತ್ತು ಸರಳ ಸಂವಹನದ ಮಹತ್ವವನ್ನು ಇದು ಸ್ಪಷ್ಟವಾಗಿ ಹೇಳುತ್ತದೆ.

ಒಟ್ಟಿನಲ್ಲಿ, "Postcard" ಒಂದು ಮನಸ್ಸಿಗೆ ಹತ್ತಿರವಾಗುವ, ಆಲೋಚನೆಗೆ ಪ್ರೇರೇಪಿಸುವ ಚಿತ್ರವಾಗಿದೆ. ವಾಣಿಜ್ಯ ಅಂಶಗಳಿಗಿಂತ ಭಾವನಾತ್ಮಕ ಕಥೆಗಳಿಗೆ ಮೌಲ್ಯ ನೀಡುವ ಪ್ರೇಕ್ಷಕರಿಗೆ ಇದು ಖಂಡಿತವಾಗಿ ಇಷ್ಟವಾಗುತ್ತದೆ. ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಪ್ರಯತ್ನವಾಗಿ ಇದು ಗಮನಾರ್ಹವಾಗಿದೆ.









ಚಂದಕ್ಕಿಂತ ಚಂದ ನೀನೇ ಸುಂದರ....

Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157.